ಗಮನ ಸೆಳೆಯುವ ಸೂಚನೆ

(ಅ) ಮಂಗಳೂರಿನ ಎಂ.ಆರ್.ಪಿ.ಎಲ್ ಕಾರ್ಯಾಚರಣೆಯಿಂದ ಕೃಷಿ ಭೂಮಿಗೆ ತೈಲ ಹರಿದು ಬೆಳೆಗೆ ತೊಂದರೆ.

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್ ಕ್ಷೇತ್ರ):- ಮಾನ್ಯ ಉಪಾಧ್ಯಕ್ಷರೇ, ಮಂಗಳೂರಿನ ಎಂ.ಆರ್.ಪಿ.ಎಲ್. ಕಾರ್ಖಾನೆಯ ಕಳಪೆ ತೈಲಮಿಶ್ರಿತ ನೀರು ಹರಿದು ಬೆಳೆ ನಾಶವಾಗುತ್ತಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಾಂಪ್ರದಾಯಕ ಇಂಧನ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯಬಯತ್ತೇನೆ.

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಪ್ರಾಮುಖ್ಯವಾದಂಥ ವಿಚಾರವನ್ನು ಪ್ರಸ್ತಾಪಿಸಿ ಸದನದ ಗಮನ ಸೆಳೆದಿದ್ದಾರೆ. ಆದರೆ ಸಂಬಂಧಪಟ್ಟ ಸಚಿವರು ಇಲಾಖಾ ಕಾರ್ಯದರ್ಶಿಗಳು ಸದನದಲ್ಲಿ ಉಪಸ್ಥಿತರಿಲ್ಲದಿದ್ದರೆ ಹೇಗೆ?

ಉಪಾಧ್ಯಕ್ಷರು:- ತಾವು ಪ್ರಾರಂಭ ಮಾಡಿ, ಸಚಿವರು ಬರುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಬೃಹತ್ ಕೈಗಾರಿಕಾ ಸಚಿವರು ಇಲ್ಲ. ಇಷ್ಟು ಪ್ರಾಮುಖ್ಯವಾದ ವಿಚಾರ ಪ್ರಸ್ತಾಪವಾದಾಗ ಅವರು ಇರಬೇಕು.....

ಉಪಾಧ್ಯಕ್ಷರು:- ಸಂಬಂಧಪಟ್ಟ ಇಲಾಖಾ ಸಚಿವರು ಇದ್ದಾರೆ. ತಾವುಗಳು ಪ್ರಾರಂಭ ಮಾಡಿ.

ಶ್ರೀ ಬಸವರಾಜ ನೀ. ಶಿವಣ್ಣನವರ್ (ಪರಿಸರ ಸಚಿವರು):- ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಕುಂಬ್ಳೆ ಸುಂದರರಾವ್‌ರವರ ಗಮನ ಸೆಳೆಯುವ ಸೂಚನೆ ಸಂಖ್ಯೆ 83 ಬಗ್ಗೆ ಈ ಕೆಳಗಿನ ಹೇಳಿಕೆಯನ್ನು ತಮ್ಮ ಅನುಮತಿ ಪಡೆದು ಓದಬಯಸುತ್ತೇನೆ.

ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಕಂಪನಿಯನ್ನು ಹಿಂದೂಸ್ಥಾನ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಇಂಡಿಯನ್ ರೇಯಾನ್ ಅಂಡ್ ಇಂಡಸ್ಟ್ರೀಸ್ ಸಹಯೋಗದೊಂದಿಗೆ ಸ್ಥಾಪಿಸಲಾಗಿದ್ದು ಈ ಉದ್ದಿಮೆಯು ವರ್ಷಕ್ಕೆ 3 ಮಿಲಿಯನ್ ಟನ್ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುತ್ತದೆ.

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ವರ್ಷಕೆ 3 ಮಿಲಿಯನ್ ಟನ್ ಸಾಮರ್ಥ್ಯದ ಯೋಜನೆಗೆ ದಿನಾಂಕ 7-10-1988ರಂದು ವಿಮೋಚನೆಯನ್ನು ನೀಡಿರುತ್ತದೆ. ಈ ವಿಮೋಚನಾ ಪ್ರಮಾಣ ಪತ್ರದಲ್ಲಿ ಕೆಳಕಂಡ ಮುಖ್ಯ ನಿಬಂಧನೆಗಳನ್ನು ಅಳವಡಿಸಲಾಗಿತ್ತು. (1) ಕಲುಷಿತ ನೀರನ್ನು ನಿಗಧಿಪಡಿಸಿರುವ ಮಾನಕಕ್ಕೆ ಶುದ್ಧೀಕರಿಸಿ ಈ ನೀರನ್ನು ಅರಬ್ಬಿಯನ್ ಸಮುದ್ರದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್

ಒಷಿಯೋನೋಗ್ರಫಿ (National Institute of oceanography) ಇವರು ನಿರ್ಧರಿಸಿರುವ ಸ್ಥಳದಲ್ಲಿ ವಿಸರ್ಜಿಸುವಂತೆ, ಹಾಗೂ ಯಾವ ಸಂದರ್ಭದಲ್ಲಿಯೂ ಕಲುಷಿತ ನೀರನ್ನು ನದಿ, ತೊರೆ, ಅಥವಾ ಎಸ್ಟುರಿಗೆ (Estuary) ಬಿಡಕೂಡದು.

(2) ಕಲುಷಿತ ನೀರನ್ನು ಶುದ್ಧೀಕರಿಸುವ ಯೋಜನೆಯನ್ನು ಹಾಗೂ ವಾಯು ಮಾಲಿನ್ಯ ನಿಯಂತ್ರಿಸುವ ಯೋಜನೆಯನ್ನು ಮಂಡಲಿಗೆ ಸಲ್ಲಿಸುವುದು.

(3) ಕರ್ನಾಟಕ ಸರ್ಕಾರದಿಂದ ಪರಿಸರ ವಿಮೋಚನೆಯನ್ನು ಪಡೆಯುವುದು.

ಉದ್ದಿಮೆಯು ಸಲ್ಲಿಸಿದ ಪರಿಸರ ಆಘಾತ ಅಧ್ಯಯನವನ್ನು ಪರಿಶೀಲಿಸಿ ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರವು ಕ್ರಮವಾಗಿ ದಿನಾಂಕ 2-3-89 ಮತ್ತು 1-2-91ರಲ್ಲಿ ಪರಿಸರ ವಿಮೋಚನೆಯನ್ನು ನೀಡಿರುತ್ತದೆ.

ಭಾರತ ಸರ್ಕಾರವು ನೀಡಿರುವ ಪರಿಸರ ವಿಮೋಚನಾ ಪತ್ರದಲ್ಲಿ ಕಲುಷಿತ ಪದಾರ್ಥಗಳನ್ನು ಆದಷ್ಟು ಮರುಉಪಯೋಗಿಸುವ ಸಾಧ್ಯತೆಯ ಬಗ್ಗೆ ಒಂದು ವರ್ಷದೊಳಗೆ ವರದಿಯನ್ನು ಸಲ್ಲಿಸುವಂತೆ ಹಾಗೂ ಕಲುಷಿತ ನೀರನ್ನು ನಿಗಧಿಪಡಿಸಿರುವ ಗುಣಮಾನಕ್ಕೆ ಶುದ್ಧೀಕರಿಸಿ NIO, Goa ಇವರು ಸಮುದ್ರದಲ್ಲಿ ಗುರುತು ಮಾಡುವ ಜಾಗದಲ್ಲಿ ವಿಸರ್ಜಿಸುವಂತೆ ಷರತ್ತನ್ನು ವಿಧಿಸಲಾಯಿತು. ಸಮುದ್ರ ವಿಜ್ಞಾನದಲ್ಲಿ NIO ಸಂಸ್ಥೆಯು ಪರಿಣತಿಯನ್ನು ಹೊಂದಿದೆ.

NIOಯು ಸುದೀರ್ಘವಾಗಿ ಅಧ್ಯಯನವನ್ನು ನಡೆಸಿ ಸಮುದ್ರದ ದಡದಿಂದ 900 ಮೀಟರ್ ದೂರ ಹಾಗೂ 2 ಮೀಟರ್ ಆಳದಲ್ಲ ಕಲುಷಿತ ನೀರನ್ನು ವಿಸರ್ಜಿಸುವಂತೆ ಸಲಹೆ ಮಾಡಿರುತ್ತದೆ.

ಕರ್ನಾಟಕ ಸರ್ಕಾರದ ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆಯು ದಿನಾಂಕ 28-3-95ರಲ್ಲಿ ಕಲುಷಿತ ನೀರನ್ನು ಸಮುದ್ರದಲ್ಲಿ ಬಿಡಲು ಅನುಮತಿಯನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಸರ್ಕಾರ ಹಾಗೂ ಭಾರತ ಸರ್ಕಾರವು ವಿಧಿಸಿರುವ ಷರತ್ತುಗಳನ್ನು ಪಾಲಿಸುತ್ತಾ ಉದ್ದಿಮೆಯು ಜಲ ಮಾಲಿನ್ಯ, ವಾಯು ಮಾಲಿನ್ಯ ಮತ್ತು ಘನ ತ್ಯಾಜ್ಯ ಮಾಲಿನ್ಯವನ್ನು ನಿಯಂತ್ರಿಸಲು ಬೇಕಾಗುವ ಮಾಲಿನ್ಯ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಿದೆ. ಈ ಯೋಜನೆಗಳನ್ನು ರಾಜ್ಯ ಮಂಡಲಿಯ ತಾಂತ್ರಿಕ ಸಲಹಾ ಸಮಿತಿಯು ಪರಿಶೀಲಿಸಿರುತ್ತದೆ.

ಉದ್ದಿಮೆಯು ಪ್ರಾಯೋಗಿಕ ಕಾರ್ಯಾಚರಣೆಯನ್ನು ಮಾರ್ಚ್ 96ರಲ್ಲಿ ಪ್ರಾರಂಭಿಸಿರುತ್ತದೆ.

ಈವರೆವಿಗೂ ಶುದ್ಧೀಕರಿಸಿದ ಕಲುಷಿತ ನೀರು ಮಂಡಳಿಯು ನಿಗಧಿಪಡಿಸಿರುವ ಮಾನಕಕ್ಕೆ ಸರಿಹೊಂದುತ್ತಿರುತ್ತದೆ. ಉದ್ದಿಮೆಯು ಸುತ್ತಮುತ್ತಲಿನ ವಾಯುವಿನ

ಗುಣಮಟ್ಟವನ್ನು ಮಾಪನ ಮಾಡುತ್ತಿದ್ದು, ಮಾಲಿನ್ಯ ಕಾರಕಗಳು ನಿಗಧಿಪಡಿಸಿರುವ ಮಾನಕಕ್ಕಿಂತ ಕಡಿಮೆ ಇರುವುದು ಕಂಡುಬಂದಿದೆ.

ಕೊಳವೆ ಜೋಡಣೆ

ಉದ್ದಿಮೆಯು ಈ ಕಲುಷಿತ ನೀರನ್ನು ಸಮುದ್ರದಲ್ಲಿ ವಿಸರ್ಜಿಸಲು ಕೊಳವೆಯ (our fall sewer) ಜೋಡನೆಯ ಕಾಮಗಾರಿಯನ್ನು ಮುಗಿಸಿದ್ದು, ಈ ಕೊಳವೆ ಮಾರ್ಗದಲ್ಲಿ ಸುಮಾರು 500 ಮೀಟರ್‌ನಷ್ಟು ತೆರೆದ ಕಾಲುವೆಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಡಿಸೆಂಬರ್ 95ರಲ್ಲಿ ಹೊರಡಿಸಿರುವ ಸರ್ಕಾರಿ ಆಜ್ಞೆಯಂತೆ ನೇಮಿಸಲಾಗಿದೆ. ಈ ಕೊಳವೆ ಮಾರ್ಗವನ್ನು ಇನ್ನು ಉಪಯೋಗಿಸಲಾಗುತ್ತಿಲ್ಲ. ಈಗ ಶುದ್ಧೀಕರಿಸಿದ ಕಲುಷಿತ ನೀರನ್ನು ಉದ್ದಿಮೆಯು ಜಲಾಶಯದಲ್ಲೇ ಸಂಗ್ರಹಿಸಿ ಭಾಗಶಃ ಉತ್ಪಾದನೆಯಲ್ಲಿ ಮರುಬಳಸಲಾಗುತ್ತಿದೆ.

ಮೇಲೆ ತಿಳಿಸಿದ ಸರ್ಕಾರಿ ಆಜ್ಞೆಯಲ್ಲಿ ಕಲುಷಿತ ನೀರನ್ನು ಮರುಬಳಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರಲು 2 ವರ್ಷ ಕಾಲಾವಕಾಶವನ್ನು ನೀಡಲಾಗಿದೆ.

ಉದ್ದಿಮೆಯು ಈವರೆವಿಗೆ ಶುದ್ಧೀಕರಿಸಿದ ಕಲುಷಿತ ನೀರನ್ನು ಮರುಬಳಸುವ ಪ್ರಸ್ತಾವನೆಯನ್ನು ಮಂಡಳಿಗೆ ಇನ್ನೂ ಸಲ್ಲಿಸಿರುವುದಿಲ್ಲ. ಆದಾಗ್ಯೂ ಮರುಬಳಕೆ ವಿಧಾನದ ತಾಂತ್ರಿಕ ಸೂಕ್ತತೆ ಮತ್ತು ಈ ಯೋಜನೆಯನ್ನು ಅಳವಡಿಸಲು ಸೂಕ್ತ ಸಮಾಲೋಚಕರನ್ನು ಗುರುತಿಸುತ್ತಿದೆ.

ತೈಲ ಮಿಶ್ರಿತ ಕಲುಷಿತ ನೀರಿನ ಆಕಸ್ಮಿಕ ವಿಸರ್ಜನೆ

ಆ) ತೈಲ ಮಿಶ್ರಿತ ಕಲುಷಿತ ನೀರು ಪಂಪ್ ಮಾಡುವ ಯಂತ್ರವು ವಿಫಲವಾದ ಕಾರಣ ಉದ್ದಿಮೆಯ ವಿದ್ಯುತ್ ಸ್ಥಾವರ ಪ್ರದೇಶದಲ್ಲಿ ಸಂಗ್ರಹಿಸುವ ಮಳೆ ನೀರು ಹೊರಚೆಲ್ಲಿದ ತೈಲ ಮತ್ತು ಇಂಧನ, ತೈಲ ಸಂಗ್ರಹಣ ಪ್ರದೇಶದಲ್ಲಿ ತೊಳೆಯುವ ಕಲುಷಿತ ನೀರನ್ನು ಸಂಗ್ರಹಿಸಲು ನಿರ್ಮಿಸಿರುವ ಗುಂಡಿ (sump)ಯಿಂದ ದಿನಾಂಕ 17-7-96 ಮತ್ತು 18-7-96ರಂದು ಹೊರ ಹರಿದು ನೈಸರ್ಗಿಕ ಕಾಲುವೆ (Natural valley) ಮೂಲಕ ಭತ್ತ ಬೆಳೆದಿರುವ 10-15 ಎಕರೆ ಜಮೀನಿಗೆ ಸೇರಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಮಂಗಳೂರಿನ ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ದಿ: 19-7-96ರಂದು ಈ ಸೋರುವಿಕೆ ನಿಂತಿರುವುದಾಗಿ ತಿಳಿಸಿರುತ್ತಾರೆ. ಮಂಡಳಿಯ ಮಂಗಳೂರಿನ ಉಪಪರಿಸರ ಅಧಿಕಾರಿಯವರು ಈ ಪ್ರದೇಶವನ್ನು ದಿನಾಂಕ 18-7-96ರಂದು ಪರಿವೀಕ್ಷಿಸಿ ಕಲುಷಿತ ನೀರಿನ ಮಾದರಿಗಳನ್ನು ಸಂಗ್ರಹಿಸಿರುತ್ತಾರೆ. ಇದರ ಫಲಿತಾಂಶವನ್ನು ನಿರೀಕ್ಷಿಸಲಾಗುತ್ತಿದೆ. ಈ ತುರ್ತು ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಮಂಡಳಿಯು ದಿನಾಂಕ 19-7-96ರಂದು ಸುದ್ದಿ ತಿಳಿದ ತಕ್ಷಣ ಜಲ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ 1974ರ ಕಲಂ 32(1)(ಸಿ) ಅಡಿಯಲ್ಲಿ ನಿಷೇದಾಜ್ಞೆಯನ್ನು ಹೊರಡಿಸಿ ಉದ್ದಿಮೆಗೆ ಕಲುಷಿತ ನೀರನ್ನು ನೈಸರ್ಗಿಕ

ಕಾಲುವೆಯಲ್ಲಾಗಲೀ ಅಥವಾ ಭೂಮಿಯ ಮೇಲಾಗಲೀ ಅಥವಾ ಬಾವಿಗಳಲ್ಲಾಗಲಿ ವಿಸರ್ಜಿಸದಂತೆ ನಿರ್ದೇಶನ ನೀಡಲಾಗಿದೆ. ಹಾಗೂ ಮಂಡಳಿಯ ಪರಿಸರ ಅಧಿಕಾರಿ ಮತ್ತು ಮಂಡಳಿಯ ವಿಶ್ಲೇಶಕರನ್ನು ಮಂಗಳೂರಿಗೆ ಕಳುಹಿಸಲಾಗಿದ್ದು ಇವರಿಗೆ ಅಲ್ಲಿಯ ಮಾಲಿನ್ಯ ಸಮಸ್ಯೆಯನ್ನು ಪರೀಕ್ಷಿಸಿ ವಸ್ತುಸ್ಥಿತಿಯ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿದೆ. ಈ ತಂಡವು ದಿನಾಂಕ 19.7.96ರಂದು ಬೆಂಗಳೂರನ್ನು ಬಿಟ್ಟಿರುತ್ತದೆ.

+ಶ್ರೀ ಕುಂಬ್ಳೆ ಸುಂದರರಾವ್:- ಅಧ್ಯಕ್ಷರೇ, ಎಂಆರ್‌ಪಿಲ್ ಸಂಸ್ಥೆ ಏನಿದೆ ಇದು ಬಂದ ದಿವಸದಿಂದ ನಮ್ಮಲ್ಲಿ ಗೊಂದಲ ನಿರ್ಮಾಣವಾಗಿದೆ, ಇವತ್ತು ನಿನ್ನೆಯಿಂದಲ್ಲ. 1984ರಲ್ಲಿ ಜಾಗ ವಶ ಮಾಡುವುದರಿಂದ ಹಿಡಿದು ಇವತ್ತಿನವರೆಗೂ ಇದೇ ತಕರಾರು ನಡೆಯುತ್ತಿದೆ. ಜನರ ಬಗ್ಗೆ ವಿಶ್ವಾಸವಿಲ್ಲ, ಪ್ರೀತಿ ಇಲ್ಲ, ಜನರಿಗೇನು ಬೇಕೋ ಅದನ್ನು ಮಾಡುವಂತಹ ಯೋಚನೆ ಇಲ್ಲ ಕೇವಲ ಕಂಪನಿಗಾಗಿ ಮಾತ್ರ ಯೋಚಿಸುತ್ತಾರೆ. ಭೂಮಿ ಬಿಟ್ಟುಕೊಟ್ಟವರಿಗೆ ಭೂದರದಲ್ಲಿ ವ್ಯತ್ಯಾಸ ಮಾಡಿದರು, ಒಂದು ಸಲ ಒಂದು, ಇನ್ನೊಂದು ಸಲ ಇನ್ನೊಂದು ದರ ಮಾಡಿದರು. ಕೆಲವರು ಕೋರ್ಟಿಗೆ ಹೋದರು, ಆಗದವರು ಕೊಟ್ಟದ್ದು ತೆಗೆದುಕೊಂಡು ಬಾಯ್ಮುಚ್ಚಿ ಕುಳಿತರು. ಆಮೇಲೆ ಕೊಳವೆ ಜೋಡಿಸುವ ಕೆಲಸ ನಡೆದಾಗ ಮೀನುಗಾರರ ಚಳುವಳಿ ನಡೆಯಿತು. ಆ ಚಳವಳಿಯಲ್ಲಿ ನಾನೂ ಸಭಾಪತಿಯವರೂ ಭಾಗವಹಿಸಿದ್ದೆವು. ನಮಗೆ ಲಾಠಿ ಏಟು ಕೊಟ್ಟು ಜೈಲಿಗೆ ಹಾಕಿದರು. ಈಗ ನಮ್ಮಿಬ್ಬರ ಮೇಲೆ ಕೇಸಿದೆ, ಅದು ಹಾಗಿರಲಿ, ಈ ಕೇಸನ್ನಾದರೂ ಸರಿಯಾಗಿ ನಿಖಾಲೆ ಮಾಡುತ್ತಾರೆಯೇ ಎಂದು ನೋಡಿದರೆ ಇದರಲ್ಲೂ ಜನರಿಗೆ ಲಾಸ್ ಆಗುವುದರ ಹೊರತು ಪಾಸಾಗುವ ಲಕ್ಷಣ ಯಾವುದೂ ಕಾಣಿಸುತ್ತಿಲ್ಲ. ಎಂಆರ್‌ಪಿಲ್ ಯಾವತ್ತು ಬಂತು ಅವತ್ತಿನಿಂದ 611 ಮನೆಗಳನ್ನೆ ಬಿಡಿಸಿದ್ದಾರೆ. ಅವರಿಗೆ ಮನೆಗೊಂದರಂತೆ ನೌಕರಿ ಕೊಡುವ ಆಶ್ವಾಸನೆ ನೆರವೇರಿಸಬೇಕಾಗಿತ್ತು. ವರ್ಷಕ್ಕೆ ನೂರು ಜನರಿಗೆ ನೌಕರಿ ಕೊಟ್ಟಿದ್ದರೂ ಹೆಚ್ಚಿನ ಸಮಸ್ಯೆ ಮುಗಿಯುತ್ತಿತ್ತು. ಆ ಕೆಲಸ ಇವರು ಮಾಡಿಲ್ಲ. ಎರಡೆರಡು ಸಲ ಸತ್ಯಾಗ್ರಹ ನಡೆಯಿತು. ನಮ್ಮ ಸತ್ಯಾಗ್ರಹ ಮತ್ತು ಅಲ್ಲಿನ ನಿರ್ವಸಿತರ ಸತ್ಯಾಗ್ರಹದ ಫಲವಾಗಿ ಸ್ವಲ್ಪಜನರಿಗೆ ಕೆಲಸ ಕೊಡಲು ಮುಂದೆ ಬಂದರು. ಆ ಕೆಲಸ ಪಡೆಯುವ ಹೊತ್ತಿಗೆ ಇನ್ನೊಂದು ಸಮಿತಿಯಿಂದ ಚಳುವಳಿ ನಡೆಯುತ್ತಿದೆ. ಇದರ ಮಧ್ಯದಲ್ಲಿ ತೈಲಸೋರುವಿಕೆ ಆರಂಭವಾಗಿದೆ. ಪಂಪ್ ಫೆಲ್ಯೂರ್ ಆಯಿತೆಂದು ಹೇಳಬಹುದು. ನಾನು ಕೇಳುತ್ತೇನೆ, ಇಷ್ಟು ದೊಡ್ಡ ಇಂಡಸ್ಟ್ರೀಯನ್ನು ಅಂದರೆ 3500 ಕೋಟಿ ರೂಗಳದ್ದು, ಪ್ರಾರಂಭಿಸಿದ್ದಾರೆ. ಇದರ ಒಂದು ಪಂಪ್ ಫೆಲ್ಯೂರಾಯಿತು ಆದ್ದರಿಂದ ಕಪ್ಪಾದ ಡಾಂಬರಿನಂತಹ ನೀರು ಹೊರಗೆ ಬಂತು ಎಂದು ಹೇಳಿದರೆ ಅದು ಜವಾಬ್ದಾರಿ ಹೇಳಿಕೆ ಆಗುವುದಿಲ್ಲ. ಜನರಿಗೆ ಗದ್ದೆಗೆ ತೋಟಕ್ಕೆಲ್ಲಾ ಹಾನಿಯೊದಗಿದೆ. ಆ ಕಪ್ಪುನೀರು ಬಂಡೆಮೇಲೆ ವ್ಯಾಪಿಸಿದೆ, ನನ್ನ ಹತ್ತಿರ ಪತ್ರಿಕೆಯ ಫೋಟೋ ಇದೆ ಕಳುಹಿಸುತ್ತೇನೆ, ಹಾಗೆ ಅಲ್ಲಿನ ನೀರು ಮಾತ್ರವಲ್ಲ ಆ ಡಾಂಬರಿನಂತಹ ದ್ರವದಿಂದ ಹುಲ್ಲೂ ಸಹ ಕಪ್ಪಾಗಿದೆ ಅದರ ಸ್ಯಾಂಪಲನ್ನು ಮಿತ್ರ ಸಭಾಪತಿಯವರು ಕೊಡುತ್ತಿದ್ದಾರೆ. ಅಲ್ಲಿಗೆ ನಾನು ಸಭಾಪತಿ ಜಯಪ್ರಕಾಶ್ ಹೆಗಡೆ, ಬಿ.ಮೊಯಿನುದೀನ್

ಆಸ್ಕರ್‌ಫರ್ನಾಂಡಿಸ್ ಎಲ್ಲರೂ ಹೋಗಿ ಆ ಹಾನಿಯನ್ನು ಕಣ್ಣಾರೆ ಕಂಡುಬಂದಿದ್ದೇವೆ. ಅಲ್ಲಿನ ಕೃಷಿಗೆ ರೈತರಿಗೆ ಮೊದಲೇ ಜನ ಸಿಕ್ಕುತ್ತಿಲ್ಲ. ಸಿಕ್ಕ ಜನರನ್ನು ಹಿಡಿದು ಕೆಲಸ ಮಾಡಿಸೋಣವೆಂದರೆ ಈ ಎಣ್ಣೆ ಪದರಪದರವಾಗಿ ನೀರಿನ ಮೇಲೆ ನಿಂತುಬಿಟ್ಟಿದೆ. ಅಲ್ಲಿ ಯಾರಾದರೂ ಹೋದರೆ ಮೈಯೆಲ್ಲಾ ತುರಿಕೆ ಬರುತ್ತಾ ಇದೆ. ಜಾನುವಾರುಗಳ ಮೈಮೇಲೆ ದದ್ದು ಬಂದಿದೆ. ಇಷ್ಟು ದಪ್ಪ ಆಗಿಬಿಟ್ಟಿದೆ, ಇದರಿಂದ ಕೃಷಿಗೆ ಜನ ಇನ್ನು ಸಿಕ್ಕುವ ಸಾಧ್ಯತೆ ಇಲ್ಲ. ಆ ನೀರಿಗಿಳಿದು ಇವರು ಕೊಡುವ ಕೂಲಿಗೆ ಮೈಕೈ ಬಾವು ಮಾಡಿಕೊಳ್ಳಲು ಯಾರು ಸಿಗುತ್ತಾರೆ? ಇಂತಹ ಸ್ಥಿತಿಯಲ್ಲಿ ಸುಮಾರು 200 ಎಕರೆ ಎಂದು ಹೇಳುತ್ತಾರೆ ಇವರು 20-25 ಎಕರೆ ಎಂದು ಹೇಳುತ್ತಿದ್ದಾರೆ, ಉದ್ದಟ್ಟೂರು ಸೂರಿಂಜೆ ಅಲ್ಲಿಂದ ಶಾಂಭವಿ ಹೊಳೆ ಎಲ್ಲಾ ಕಡೆಗಳಲ್ಲೂ ಎರಡೂ ಬದಿಗಳಲ್ಲೂ ದಪ್ಪ ಕಪ್ಪು ಪರೆ ನಿಂತಿದೆ. ಇದು 20-25 ಎಕರೆ ಆಗಿರಲಿಕ್ಕೆ ಸಾಧ್ಯವಿಲ್ಲ. ಮುಖ್ಯ ಪ್ರಶ್ನೆಯೆಂದರೆ ಕುಡಿಯುವ ಬಾವಿಗಳಿಗೂ ಈ ದ್ರವ ಹರಡಿದೆ. ಜನ ನೀರು ಕುಡಿಯುವ ಹಾಗಿಲ್ಲ. ಆ ನೀರು ಕುಡಿಯುವುದರಿಂದ ಎಂತಹ ಕಾಯಿಲೆ ಬರುತ್ತದೋ ಗೊತ್ತಿಲ್ಲ, ಒಂದು ವೇಳೆ ಗದ್ದೆಯಲ್ಲಿ ಬೇಸಾಯ ಮಾಡಿದರೂ ಸಹ ಆ ಬೆಳೆ ಉಂಡವನು ಬದುಕುತ್ತಾನೋ ಇಲ್ಲವೋ ಗೊತ್ತಿಲ್ಲ. ಅದೂ ಸಂಶೋಧನೆಯಾಗಬೇಕಾಗಿದೆ. ನಾನು ಕೇಳುವುದಿಷ್ಟೆ: ಒಂದು ಕೈಗಾರಿಕೆಗೆ ಅನುಮತಿ ಕೊಡುವ ಹೊತ್ತಿನಲ್ಲಿ ಜನರಿಗೆ ತೊಂದರೆಯಾಗುವಂತಹ ಯಾವುದೇ ಕಾರ್ಯವನ್ನು ಮಾಡಬಾರದು ಎಂದು ಅವರಿಗೆ ಷರತ್ತು ಹಾಕಿರುತ್ತೀರಿ. ಇಷ್ಟು ದೊಡ್ಡ ತೊಂದರೆ ಇವರು ಮಾಡಿದ್ದಾರೆ, ಅದನ್ನು ನಿಲ್ಲಿಸಿ ಇವರಿಗೇನು ಪರಿಹಾರ ಕೊಡಬೇಕೋ ಅದನ್ನು ಕೊಟ್ಟು ಆಮೇಲೆ ಆ ಕೆಲಸ ಮುಂದುವರೆಸುವ ಹಾಗೆ ಮಾಡಬೇಕಾಗಿದೆ. ಅವರು ಎರಡುಮೂರು ದಿವಸ ಏನೂ ಇಲ್ಲ ಎಂದು ಹೇಳಿದರು ನಾವು ಹೋಗಿ ನೋಡಿದ ಮೇಲೆ ಹೌದು ಉಂಟು ಎಂದು ಒಪ್ಪಿಕೊಂಡರು, ಈಗ ಸರಿಹೋಗಿದೆ ಎಂದು ಹೇಳುತ್ತಿದ್ದಾರೆ. ಏನು ಸರಿಹೋಗಿದೆ, ಏನು ಪರಿಹಾರ, ಅವರು ಹೀಗೇ ಮಾಡುತ್ತಾ ಹೋದರೆ ಎಂಆರ್‌ಪಿಎಲ್ ಎಂಬ ರಾಕ್ಷಸ ಏನಿದ್ದಾನೆ ಇವನ ಉಪಟಳದಲ್ಲಿ ದಕ್ಷಿಣ ಕನ್ನಡದ ಬಡ ಜನ ಬದುಕುವುದು ಹೇಗೇ?

ಶ್ರೀ ಕೆ.ಜಯಪ್ರಕಾಶ್ ಹೆಗಡೆ:- ಅಧ್ಯಕ್ಷರೇ, ನಮ್ಮ ಸಣ್ಣ ಕೈಗಾರಿಕೆ ಸಚಿವ ಮೊಯಿದ್ದೀನ್ ಹಾಗೂ ನಾನು ಇಬ್ಬರೂ ಸ್ಥಳಕ್ಕೆ ಹೋಗಿದ್ದೆವು. ನಾವು ಹೋಗಿಬಂದ ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ. ಅದಕ್ಕಾಗಿ ಎರಡು ಮಾತು. ರೆವಿನ್ಯೂ ಇಲಾಖೆ ಅಧಿಕಾರಿಗಳು ಮತ್ತು ಮಾಲಿನ್ಯ ಮಂಡಲಿ ಅಧಿಕಾರಿಗಳು ಬೆಂಗಳೂರಿನಿಂದ ಅಲ್ಲಿಗೆ ಬಂದಿದ್ದರು, ಅವರು ಈ ಬಗ್ಗೆ ವರದಿ ಒಪ್ಪಿಸಲಿಕ್ಕೆ ಇದ್ದಾರೆ. ನಾವು ಆ ಬಗ್ಗೆ ವಿಚಾರಿಸಿದಾಗ ಒಂದೆರಡು ದಿವಸದಲ್ಲಿ ವರದಿ ಒಪ್ಪಿಸುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

+ಶ್ರೀ ಕುಂಬ್ಳೆ ಸುಂದರರಾವ್:- ಅಧ್ಯಕ್ಷರೇ, ಕರ್ತವ್ಯಲೋಪ ಮಾಡಿದ ಮೇಲೆ ಆ ಕಂಪೆನಿ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ? ಮಾತ್ರವಲ್ಲ ನಮ್ಮ ಕಡೆಯ ಅಧಿಕಾರಿಗಳು

ಯಾರಿದ್ದಾರೆ ಅವರು ಈ ರೀತಿಯ ಕಲುಷಿತ ನೀರು ಬಂದಾಗ ಅದಕ್ಕೆ ತಡೆಯಾಜ್ಞೆ ಯಾಕೆ ವಿಧಿಸಲಿಲ್ಲ, ನಾವು ಊರವರೆಲ್ಲಾ ಸೇರಿಕೊಂಡು ಗಲಾಟೆ ಮಾಡಿದ ಮೇಲೆ ಮಾತ್ರ ಇವರಿಗೆ ಎಚ್ಚರಾಗುತ್ತದೆ ಎಂದಾದರೆ ಈ ಕಂಪೆನಿ ಬಗ್ಗೆ ಸರ್ಕಾರಕ್ಕೆ ಕರುಣೆ ಉಂಟು ಎಂದು ನಾವು ತಿಳಿಯಬೇಕೋ ಕರ್ತವ್ಯಪ್ರಜ್ಞೆ ಉಂಟು ಅಂತ ಯೋಚನೆ ಮಾಡಬೇಕೋ? ಆದ್ದರಿಂದ ನಾವು ಹೇಳುವುದಿಷ್ಟೆ: ಯಾವ ಗದ್ದೆಗೆಲ್ಲಾ ಈನೀರು ತುಂಬಿದೆ, ಎಲ್ಲೆಲ್ಲಿ ಬೇಸಾಯ ಮಾಡುವ ಸ್ಥಿತಿ ಇಲ್ಲ ಅವರಿಗೆ ಮೊದಲು ಪರಿಹಾರ ಕೊಡಬೇಕು. ಮಾತ್ರವಲ್ಲ ಕಂಪೆನಿ ಇನ್ನು ಮುಂದೆ ಹೀಗೆ ಮಾಡುವುದಿಲ್ಲ ಮಾಡಿದರೆ ಪರಿಹಾರ ಕೊಡುತ್ತೇವೆ ಎಂಬುದಕ್ಕೆ ಬದ್ಧರಾಗಿರಬೇಕು. ಆಗ ಮಾತ್ರ ವಾತಾವರಣ ತಿಳಿಯಾಗುತ್ತದೆ. ಜನ ನಮ್ಮನ್ನು ದಾರಿ ನಡೆಯಲಿಕ್ಕೆ ಬಿಡುತ್ತಿಲ್ಲ ಅಲ್ಲಿ, ಹೋದಲ್ಲಿ ಗುಂಪುಗುಂಪಾಗಿ ಮುತ್ತಿಗೆ ಹಾಕುತ್ತಿದ್ದಾರೆ. ಪತ್ರಿಕಾಪ್ರಕಟಣೆ ಬರುತ್ತಿದೆ, ಬೇರೆಬೇರೆ ಫೋಟೋಗಳು ಬರುತ್ತಿವೆ, ಅವುಗಳನ್ನು ಗಮನಿಸಿದರೆ ಗೊತ್ತಾಗುತ್ತದೆ ಪರಿಸ್ಥಿತಿ ಎಷ್ಟು ಗಂಭೀರ ಇದೆ ಎಂದು. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಜವಾಬ್ದಾರಿಯಿಂದ ವರ್ತಿಸಬೇಕು, ಜನರ ಕಷ್ಟಕ್ಕೆ ಸ್ಪಂದಿಸಬೇಕು ಎಂಆರ್‌ಪಿಎಲ್‌ನ ಸಮಸ್ಯೆಗಳ ಜೊತೆಗೆ ಹೊಸ ಸಮಸ್ಯೆಗಳನ್ನು ಸೃಷ್ಟಿಮಾಡಲು ಅವಕಾಶ ಕೊಡಬಾರದು. ಆ ಸಮಸ್ಯೆಗಳ ಪರಿಹಾರ ತಡವಾಗುವುದು ಸ್ವಾಭಾವಿಕ, ಇದು ತಡವಾಗಬಾರದು.

ಶ್ರೀ ಬಸವರಾಜ ನಿ.ಶಿವಣ್ಣನವರ್:- ಸರ್ಕಾರ ಕೈಗಾರಿಕೋದ್ಯಮಿಗಳ ಪರವಾಗೇನೂ ಕೆಲಸ ಮಾಡುವುದಿಲ್ಲ. ತಪ್ಪು ಆಗಿರುವುದು ನಿಜ, ರೈತರ ಬೆಳೆ ಕೂಡ ಲುಕ್ಸಾನು ಆಗಿದೆ, ಈಗಾಗಲೇ ನಮ್ಮ ಪರಿಸರ ಮಾಲಿನ್ಯ ಮಂಡಲಿ ತಾ: 19-7-96ರಂದು 1984ನೇ 32 ಸಿಎಡಿ ಪ್ರಕಾರ ಅವರಿಗೆ ಕಟ್ಟುನಿಟ್ಟಿನ ಆಜ್ಞೆ ಕೊಡಲಾಗಿದೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಮನದಲ್ಲಿಟುಕೊಂಡು ಪೂರ್ತಿ ಏವರ ಮಾಹಿತಿ ತರಿಸಿಕೊಂಡು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್:- ಎಂ.ಆರ್.ಪಿ.ಎಲ್‌ನವರು ಒಂದು ಕೊಳವೆಯನ್ನು ಎತ್ತರಕ್ಕೆ ಸ್ಥಾಪನೆ ಮಾಡಿದ್ದಾರೆ. ಆ ಕೊಳವೆಯಿಂದ ಬರುವಂತಹ ಹೊಗೆ ಏನು ಇದೆ ಅದು ದುರ್ವಾಸನೆಯಿಂದ ಕೂಡಿದೆ ಅಲ್ಲಿ ಹೋದರೆ ಉಸಿರು ಕಟ್ಟುತ್ತದೆ ರಾತ್ರಿ ಮಲಗಿದವರು ಬೆಳಿಗ್ಗೆ ಏಳುವಾಗ ತಲೆ ಸಿಡಿಯುತ್ತದೆ. ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರು ನೀರು ಬಿಡುವುದು ಒಂದು ಕಡೆ ಹೊಗೆ ಬಿಡುವುದು ಒಂದು ಕಡೆ ನಾವು ಪ್ರಾಣ ಬಿಡುವುದು ಮಾತ್ರ ಬಾಕಿ ಅಲ್ಲಿ.

ಉಪಾಧ್ಯಕ್ಷರು:- ಅವರು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು:- ವರ್ಷ ಪೂರ್ತಿ ಕ್ರಮವೇ ಆಗುತ್ತದೆ.

+ಶ್ರೀ ಯು.ಆರ್.ಸಭಾಪತಿ:- ಇದು ಬಹಳ ಸುಲಭದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಪರಿಶೀಲನೆ ಮಾಡುತ್ತೇವೆಂದು ಹೇಳುವಂತಹ ಮಾತಲ್ಲ. ಭೂಪಾಲ್ ದುರಂತವೆಂದು

ತಾವು ಕೇಳಿದ್ದೀರಿ? ಎಷ್ಟು ಸಾವಿರ ಜನ ಸತ್ತರು? ಇವತ್ತು ಪ್ರಾಯೋಗಿಕ ಹಂತದಲ್ಲಿ ಎಂಆರ್‌ಪಿಎಲ್ ಇದೆ. ಸಮುದ್ರಕ್ಕೆ ಕೊಳವೆ ಹಾಕುವಾಗ ರೀ ಸೈಕ್ಲಿಂಗ್ ಯೂನಿಟ್ ಹಾಕಿ ಅದನ್ನು ಪರಿಶುದ್ಧ ಮಾಡಿ ಹಾಕಬೇಕೆನ್ನುವ ತೀರ್ಮಾನ ಮಾಡಿ ಬೆಸ್ತರು ಉಗ್ರವಾದ ಚಳುವಳಿ ಮಾಡಿದ್ದರು. ರಾಷ್ಟ್ರೀಯ ಹೆದ್ದಾರಿ ಬಂದ್ 3 ದಿವಸ ಆಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದು ಒಂದು ನಿರ್ಣಯ ಮಾಡಿದರು. ಎಂಆರ್‌ಪಿಎಲ್ ಬಗ್ಗೆ ನಿರ್ಣಯಗಳನ್ನು ತೆಗೆದುಕೊಂಡರು. ಒಂದಾದರೂ ಅದನ್ನು ಪೂರೈಸಿದ್ದಾರೋ? ಇಲ್ಲಿ ಭಾಷಣದ ಪ್ರಶ್ನೆ ಅಲ್ಲ. ಬಹಳ ಮುಖ್ಯವಾದಂತಹ ವಿಚಾರ. 500 ಎಕರೆ ಜಮೀನು ಇದೆ. ತ್ಯಾಜ್ಯ ವಸ್ತು ಪಸರಿಕೊಂಡು ಅದೆಲ್ಲಾ ಸರ್ವನಾಶವಾಗಿದೆ. ಇವರು 15 ಎಕರೆ ಎಂದು ಇಲ್ಲಿ ಕೊಡುತ್ತಿದ್ದಾರೆ. ಪರಿಸರ ಮಂಡಲಿ ಅಧಿಕಾರಿಗಳು ಮತ್ತು ಎಂಆರ್‌ಪಿಎಲ್ ನವರು ಜೊತೆ ಶಾಮೀಲಾಗಿದ್ದಾರೆಂದು ಹೇಳಬಯಸುತ್ತೇನೆ. ನೀವು ಸರಕಾರದವರು ಅವರ ಜೊತೆಗೆ ಶಾಮೀಲಾಗುತ್ತೀರಿ? ಅದರ ಮೇಲೆ ಈ ರೀತಿ ಸುಳ್ಳು ವರದಿಯನ್ನು ಏಕೆ ಹೇಳಬೇಕು. ಮಳೆ ಬರಲಿಲ್ಲ. ಮೊನ್ನೆ ಮಳೆ ಬಂದಾಗ ಅಲ್ಲಿ ನಾಟಿ ಮಾಡಿದರು. ಎಕರೆ ಎಕರೆ ಈ ರೀತಿ ಕೈಗೆ ಡಾಂಬರು ತಾಗುತ್ತದೆ. ಎಕರೆ ಎಕರೆ ಅಗ್ರಿಕಲ್ಚರ್ ಭೂಮಿ ಹಾಳಾಗುತ್ತಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಬೆಳೆ ನಾಶವಾಗಿರುವ ಬಗ್ಗೆ ಸದನದಲ್ಲಿ ತೋರಿಸಿದರು).

ಇವರು 15 ಎಕರೆ ಎಂದು ಇಲ್ಲಿ ಹೇಳುತ್ತಾ ತಮಾಷೆ ಮಾಡುತ್ತಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜನರ ಜಿಲ್ಲೆಯ ಜೀವ ಹೋಗುತ್ತಿದೆ. ಪರಿಸರ ಮಾಲಿನ್ಯ ಮಂಡಲಿ ಈ ರೀತಿ ಉತ್ತರ ಕೊಡುವುದು ಸರಿಯಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಸರಕಾರದವರು ನೀವು ಎಲ್ಲಿಯಾದರೂ ಇದನ್ನು ಸಾಮಾನ್ಯವೆಂದು ತಿಳಿದಕೊಂಡರೆ ನಾಳೆ ನಾವು ಮತ್ತೆ ದಕ್ಷಿಣ ಕನ್ನಡ ಜಿಲ್ಲೆಯ ಜನರ ನೋವಿನಿಂದ ಮತ್ತೆ ಹೇಳಬೇಕಾಗುತ್ತದೆ. ಮೆಲ್ಲಗೆ ಹೇಳಿದರೆ ನಿಮಗೆ ಕೇಳಿಸುವುದಿಲ್ಲ ಕಿವಿ ಇದ್ದು ಕುರುಡರಾಗಿದ್ದೀರಿ. ಈ ರೀತಿ 15 ಎಕರೆ ಎಂದು ಹೇಳಿಕೆ ಕೊಡುವುದೇ?

ಉಪಾಧ್ಯಕ್ಷರು:- ತಾವು ಸಮಾಧಾನದಿಂದ ಕೇಳಬೇಕು. ತಾವು ಭಾಷಣ ಮಾಡುತ್ತಿದ್ದೀರಿ ಕ್ಲಾರಿಫಿಕೇಷನ್ ಕೇಳಿ. ಈ ಕಡೆ ನೋಡಿ ಹೇಳಿ.

ಶ್ರೀ ಯು.ಆರ್.ಸಭಾಪತಿ:- ಕಿವಿ ಇದ್ದೂ ಕುರುಡರಾಗಿದ್ದೀರಿ, ಈ ರೀತಿಯ ಹೇಳಿಕೆ ಕೊಡುವುದಾ? 15 ಎಕರೆ ತಮಾಷೆಯಾ? ಮಂತ್ರಿಗಳೂ ಹೋಗಿದ್ದಾರೆ. ಸರಕಾರಕ್ಕೆ ತಮ್ಮ ಮೂಲಕ ಒಂದು ಮಾತನ್ನು ಹೇಳಬಯಸುತ್ತೇನೆ ಈ ರೀತಿಯ ಹಾರಿಕೆ ಉತ್ತರ ಕೊಡುವುದು ಸರಿಯಲ್ಲ. ಜನರಿಗೆ ಆದಂತಹ ಅನಾಹುತಕ್ಕೆ ತಾವು ಯಾವ ರೀತಿಯಲ್ಲಿ ಪರಿಹಾರ ಕೊಡುತ್ತೀರಿ? ಪರಿಹಾರಕ್ಕೇನು ವ್ಯವಸ್ಥೆ ಮಾಡಿದ್ದಾರೆ ಮತ್ತು ಯಾವ ಪರ್ಯಾಯ ವ್ಯವಸ್ಥೆ ಮಾಡಿದ್ದಾರೆಂಬುದನ್ನು ಅವರು ಹೇಳಲಿ.

ಉಪಾಧ್ಯಕ್ಷರು:- ನೀವು ಆ ರೀತಿ ಮಾತನಾಡಿದರೆ ಹೇಗೆ? ಸಮಾಧಾನದಿಂದ ಕೇಳಿ, ಅವರು ಉತ್ತರ ಕೊಡುತ್ತಾರೆ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಸದಸ್ಯರ ಕಳಕಳಿ ಗೊತ್ತಾಗಿದೆ. ಸರಕಾರ ಕೂಡ ಅವರು ಹೇಳತಕ್ಕಂತಹ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದೆ. ಮಾನ್ಯ ಮಂತ್ರಿಗಳು ಉತ್ತರ ಹೇಳಲಿ ನಂತರ ಕ್ಲಾರಿಫಿಕೇಷನ್ ಕೇಳಲಿ. ಮೈ ಮೇಲೆ ಬಿದ್ದು ಹೀಗೆ ಹೇಳಬೇಕು ಹಾಗೆ ಹೇಳಬೇಕು ಎಂದರೆ ಹೇಗಾಗುತ್ತದೆ?

(ಗೊಂದಲ)

ಉಪಾಧ್ಯಕ್ಷರು:- ತಾವು ಕುಳಿತುಕೊಳ್ಳಿ. ಹಾಗೆ ಹೇಳಬಾರದು. ಮಂತ್ರಿಗಳು ಹೇಳುವ ತನಕ ಸಮಾಧಾನವಿಲ್ಲವೆಂದರೆ ಹೇಗೆ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಪತಿಯವರು ದಕ್ಷಿಣ ಕನ್ನಡದ ಎಲ್ಲಾ ಜಿಲ್ಲೆಯ ಗೌರವಾನ್ವಿತ ಶಾಸಕರುಗಳು ಅವರ ಭಾವನೆಯನ್ನು ಈ ಸದನದಲ್ಲಿ ಹೇಳಬೇಕು ಜನರ ಸಮಸ್ಯೆ ಏನು ಇದೆ ಅಲ್ಲಿ ಪರಿಸರದ ಮಾಲಿನ್ಯದ ವಿಚಾರ ಇರಬಹುದು ಅಥವಾ ಅಲ್ಲಿ ಬರುತ್ತಿರತಕ್ಕಂತಹ ಕೈಗಾರಿಕೆಗಳ ವಿಚಾರ ಇರಬಹುದು ಅದೆಲ್ಲವನ್ನೂ ಇಲ್ಲಿ ಹೇಳಲಿಕ್ಕೆ ಅವಕಾಶ ಇದೆ. ಅವರು ಹೇಳಲಿ. ನಾವು ಕೇಳಲಿಕ್ಕೂ ತಯಾರಿದ್ದೇವೆ ಸರಿ ಮಾಡಲಿಕ್ಕೂ ತಯಾರಿದ್ದೇವೆ.

ಒಬ್ಬ ಮಾನ್ಯ ಸದಸ್ಯರು:- ಈ ಪ್ರಶ್ನೆ ಹಾಗಲ್ಲ. ಈ ಸದನದಲ್ಲಿ ಮಾತನಾಡಿದರೆ ತಕ್ಷಣ ಆಗುವುದಿಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾವು ಕೇಳಲಿಕ್ಕೂ ತಯಾರಾಗಿದ್ದೇವೆ. ಮತ್ತು ಎಲ್ಲಾ ರೀತಿಯಿಂದ ಇದನ್ನು ಸರಿಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಕೂಡ ಮಾಡುವುದಕ್ಕೆ ಸರಕಾರ ಸಿದ್ಧವಿದೆ. ಮಾನ್ಯ ಸಭಾಪತಿಯವರೇ ಸರ್ಕಾರ ಕಿವುಡೋ ಅಥವಾ ಕಣ್ಣು ಕಾಣಿಸುವುದಿಲ್ಲವೋ ಎಂದು ಹೇಳುವುದಕ್ಕೆ ಅವರಿಗೆ ಹಕ್ಕು ಇದೆ. ನಾವು ಎಲ್ಲಾ ರೀತಿಯ ಟೀಕೆಗಳನ್ನು ಪ್ರಹಾರಗಳನ್ನು ತೆಗೆದುಕೊಳ್ಳಲಿಕ್ಕೆ ತಯಾರಿದ್ದೇವೆ. ಇದನ್ನು ವಾಪಸ್ ಕೊಟ್ಟಾಗ ಅವರೂ ಕೂಡ ತಯಾರು ಇದ್ದಾರೆಂದು ನಮಗೂ ಗೊತ್ತಿದೆ. ಆದರೆ ಇವರು ಅವರ ಭಾವನೆಗಳನ್ನು ವ್ಯಕ್ತ ಮಾಡುವಾಗ ಇದು ವಿಧಾನ ಸಭೆ ಎಂದು ನೆನಪಿನಲ್ಲಿಟ್ಟುಕೊಂಡು ವ್ಯಕ್ತ ಮಾಡಿದರೆ ಈ ಸದನದ ಸಭೆಯ ಗೌರವ ಹೆಚ್ಚಾಗುತ್ತದೆಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ನಾನು ಕೂಡ ಒಬ್ಬ ಸದಸ್ಯನಾಗಿದ್ದೇನೆ 13 ವರ್ಷದಿಂದ ಗೆದ್ದು ಬಂದಿದ್ದೇನೆ.

ಶ್ರೀ ರುಕ್ಮಯ್ಯ ಪೂಜಾರಿ:- ಸುಳ್ಳು ಉತ್ತರ ಕೊಡುವಾಗ ನಾವು ಏನು ಹೇಳಬೇಕು? 15 ಎಕರೆ ಎಂದು ಹೇಳಿದ್ದಾರೆ. 400 ಎಕರೆ ಹಾಳಾಗಿದೆ. ಅದಕ್ಕೆ ನಾವು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು:- 400 ಎಕರೆಯನ್ನು 14,20 ಎಕರೆ ಅಂದರೆ ಏನು ಅರ್ಥ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಪೂಜಾರಿಯವರು 4 ಸಲ ಗೆದ್ದು ಬಂದಿದ್ದಾರೆ ನೀವು ಮಾತನಾಡುವುದೇ ಅಪರೂಪ. ನೀವು ಹೇಳಿ. ನೀವು ಎದ್ದು ನಿಂತು 15 ಎಕರೆ ಅಲ್ಲ 500 ಎಕರೆ ಇದ್ದರೆ ಹೇಳಿ ತಪ್ಪಾಗಿದ್ದರೆ ತಿಳಿಸಿ ತಿದ್ದುಕೊಳ್ಳೋಣ. ನಾವು ಹೇಳಿದ್ದೆಲ್ಲಾ ಸರಿ ಎಂದು ನಾನು ಹೇಳುವುದಿಲ್ಲ. ಒಂದು ವ್ಯವಸ್ಥೆ ಇರುತ್ತದೆ. ಸರ್ಕಾರಿ ಅಧಿಕಾರಿಗಳು ಕೊಟ್ಟಿರತಕ್ಕಂತಹ ಅಂಕಿ ಅಂಶಗಳ ಆಧಾರದ ಮೇಲೆ ಮಂತ್ರಿಗಳು ಇಲ್ಲಿ ಉತ್ತರ ಹೇಳುತ್ತಾರೆ. ಅವರು ಹೊಸದಾಗಿ ಗೆದ್ದು ಬಂದು ಮೊದಲ ಬಾರಿಗೆ ಮಂತ್ರಿಗಳಾಗಿದ್ದಾರೆ. ನೀವೂ ಸಹ ಅದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಭಾವನೆಗಳಿಗೆ ಸಿಟ್ಟಿನ ಕೈಗೆ ನೀವು ನಿಮ್ಮ ಬುದ್ಧಿಯನ್ನು ಕೊಟ್ಟಾಗ ಅದು ಸರಿಯಾಗುವುದಿಲ್ಲ. ಈಗ ನಾನು ಇಲ್ಲಿ ಕುಳಿತಿದ್ದೇನೆ. ನನ್ನ ಕಡೆಗೆ ಮುಖ ನೋಡಿಕೊಂಡು ಕೈ ತೋರಿಸುತ್ತಾ ನೀವು ಕಿವುಡು ನಾ ನಿಮಗೆ ಕಣ್ಣು ಕಾಣಿಸುವುದಿಲ್ಲವೇ ಎಂದು ಹೇಳಿದರೆ ನಾನೂ ಅದೇ ರೀತಿ ಹೇಳಬಹುದು. ನಿಮ್ಮ ಅಭಿಪ್ರಾಯಗಳನ್ನು ನೀವು ವ್ಯಕ್ತ ಮಾಡಿ. ಅದರಲ್ಲೇನು ತಕರಾರು ಇಲ್ಲ. ಬಹಳ ಕಠೋರವಾಗಿರತಕ್ಕಂತಹ ಶಬ್ಧಗಳನ್ನು ತಾವು ಉಪಯೋಗ ಮಾಡಿ ನಮ್ಮ ಸರಕಾರವನ್ನು ಸರಕಾರದ ಕಾರ್ಯಕ್ರಮಗಳನ್ನು ಇವೆಲ್ಲವನ್ನೂ ಟೀಕೆ ಮಾಡಲಿಕ್ಕೆ ಅವಕಾಶ ಇದೆ. ನಿಮ್ಮ ಹಕ್ಕು ಅದು. ನೀವೂ ಗೆದ್ದು ಬಂದಿದ್ದೀರಿ. ತಮ್ಮ ಜನರ ಸಮಸ್ಯೆಯನ್ನು ಹೇಳಲೇಬೇಕು. ನಾವೂ ಗೆದ್ದು ಬಂದಿದ್ದೇವೆಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನೀವು ಹೀಗೆ ಒಬ್ಬೊಬ್ಬರನ್ನು ಪಾಯಿಂಟ್ ಔಟ್ ಮಾಡಿಕೊಂಡು ಹೇಳಿದಾಗ ನಮ್ಮ ಪರಿಸ್ಥಿತಿ ಏನಾಗುತ್ತದೆಂಬುದನ್ನು ತಾವು ವಿಚಾರ ಮಾಡಬೇಕು. ಈ ಕೊಜೆಂಟ್ರಿಕ್ಸ್ ವಿಚಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರ ಭಾವನೆಗಳು ನಮಗೆ ಅರ್ಥವಾಗುತ್ತದೆ. ತೊಂದರೆ ಇದೆ. ನೀವು ಹೇಳುವುದನ್ನು ಸರಿಯಾಗಿ ಹೇಳಿ. ಜಗಳ ಆಡುವುದರಿಂದ ಉಪಯೋಗವಿಲ್ಲ. ಕೊಜೆಂಟ್ರಿಕ್ಸ್ ಬಗ್ಗೆ ಪ್ರತಿಯೊಬ್ಬರೂ ಹೇಳಲಿ. ಬೇಡವೆಂದು ಯಾರು ಹೇಳಿದರು. ನೀವು ಮಾತನಾಡುತ್ತಿರತಕ್ಕಂತಹ ವರ್ತನೆ ನೋಡಿದರೆ ನನಗೆ ಇಲ್ಲಿ ಕುಳಿತುಕೊಳ್ಳುವುದಕ್ಕೇ ಭಯವಾಗುತ್ತದೆ.

+ಶ್ರೀ ಯು.ಆರ್.ಸಭಾಪತಿ:- ನನ್ನ ಇವತ್ತಿನ ವರ್ತನೆಯಿಂದ ನನ್ನ ನಡತೆಯಿಂದ ನಿಮಗಾಗಲೀ ಈ ಸದನಕ್ಕೆ ಅಗೌರವವಾಗಿದೆ ಎಂದರೆ ನಾನು ಕ್ಷಮೆ ಯಾಚಿಸುತ್ತೇನೆ. ಜನರ ನೋವಿನಿಂದ ಅಲ್ಲಿ ನಾವು ಪ್ರತ್ಯಕ್ಷದರ್ಶಿಯಾಗಿ ನೋಡಿದಂತಹ ವಿಚಾರವೇನು ಇದೆ ಅದು 500 ಎಕರೆಗೂ ಹೆಚ್ಚು ಹಾಳಾಗಿದೆ. ಇವತ್ತು ಉತ್ತರ ಕೊಡುವಾಗ 10-15 ಎಕರೆ ಎಂದು ಹೇಳಿದರೆ ಇದೇನು ಮಕ್ಕಳಾಟಿಕೆ ಎಂದು ಹೇಳುತ್ತಿದ್ದೀರಾ ಎಂದು ನನಗೆ ಅಷ್ಟೇ ಸ್ವಲ್ಪ ಬೇಸರ ಬಂತು. ಮಾನ್ಯ ಸಿಂಧ್ಯರವರನ್ನು ತೋರಿಸಿ ನಾನು ಹೇಳಿಲಿಲ್ಲ. ನಿಮ್ಮನ್ನು ದೂಷಿಸಿ ಬೆಟ್ಟು ಮಾಡಲಿಕ್ಕೆ ಬಂದವರಲ್ಲ. ಸದನಕ್ಕೆ ನಾನು ಹೊಸಬನು ಇರಬಹುದು. ಆದರೆ ವರ್ತನೆ ಹೇಗೆ ಮಾಡಬೇಕೆಂಬ ನಿಮ್ಮ ಭಾವನೆ ನನಗೆ ಅರ್ಥವಾಗುತ್ತದೆ. ಆದರೆ ಕೆಲವೊಮ್ಮೆ ಸರಕಾರದ ಅಧಿಕಾರಿಗಳು ಕೊಟ್ಟಂತಹ

ಉತ್ತರದಿಂದ ನೀವೇ ನಮ್ಮನ್ನು ಉದ್ರೇಕಿಸುವಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡುತ್ತೀರಿ. ಎಂಆರ್‌ಪಿಎಲ್‌ನಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಗಲಾಟೆಯಾಗಿದೆ ಎಂದು ತಮಗೂ ಗೊತ್ತಿದೆ. ಇವರು ಮತ್ತೆ ಮತ್ತೆ ನಮ್ಮನ್ನು ಟೆಸ್ಟ್ ಮಾಡಲಿಕ್ಕೋಸ್ಕರ ಅಧಿಕಾರಿಗಳೊಟ್ಟಿಗೆ ಶಾಮೀಲು ಮಾಡಿಕೊಂಡು ಇವರು ಇವರದ್ದೇ ಆದಂತಹ ರೀತಿಯಲ್ಲಿ ಮಾಡಿದರೆ ನಾಳೆ ಭೂಪಾಲ್ ದುರಂತ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿ ಸಾವಿರಾರು ಜನರು ಸತ್ತಮೇಲೆ ಏನು ಮಾಡುತ್ತೀರಿ ಎಂದು ಹೇಳುವ ಒಂದೇ ದುಃಖ ನಮಗೆ. ಬೇರೇನೂ ಇಲ್ಲ. ಅಂತಹ ಘಟನೆಗೆ ಅವಕಾಶ ಕೊಡಬೇಡಿ. ಅಂತಹ ಘಟನೆಯಾಗುವ ಮೊದಲೇ ಎಚ್ಚೆತ್ತುಕೊಳ್ಳಿ ಎಂದು ಹೇಳುತ್ತಿದ್ದೇನೆಯೇ ವಿನಹ ಮತ್ತೇನೂ ಅಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ನಮ್ಮ ಸಹಾಯಕ್ಕೆ ಬರಬೇಕು. ಮಾನ್ಯ ಸಭಾಪತಿಯವರು ಹೀಗೆ ಮಾತನಾಡುತ್ತಿದ್ದಾರೆಂದು ತಾವು ಗಮನಕ್ಕೆ ತಂದಿರಿ. ಮಾನ್ಯ ಕುಂಬ್ಳೆ ಸುಂದರರಾಯರು ಯಾವ ರೀತಿ ಮಾತನಾಡಿದರು ಎಂದು ತಮಗೆ ತಿಳಿದಿದೆ. ನಾವು ವಿರೋಧ ಪಕ್ಷದಲ್ಲಿ ಕೂತು ವಿಚಾರವನ್ನು ಪ್ರಸ್ತಾಪ ಮಾಡಿದಾಗ ಜವಾಬ್ದಾರಿಯುತ ಶಾಸಕರು 400-500 ಎಕರೆ ಪರಿಸರ ಮಾಲಿನ್ಯದಿಂದ ಸರ್ವನಾಶವಾಗುತ್ತಿದೆ ಭೂಪಾಲ್ ದುರಂತ ಮತ್ತೆ ರಿಪೀಟಾಗಬಾರದು ಒಬ್ಬ ಶಾಸಕರಾಗಿ ನಾವು ಇಲ್ಲಿ ಪ್ರಸ್ತಾಪ ಸರಿಯಾಗಿ ಮಾಡದಿದ್ದರೆ ನಾವು ಅಪರಾಧಿ ಸ್ಥಾನದಲ್ಲಿ ನಿಂತ ಹಾಗಾಗುತ್ತದೆಂದು ಗಮನಕ್ಕೆ ತಂದಾಗ ಒಬ್ಬ ಜವಾಬ್ದಾರಿಯುತವಾದ ಶಾಸಕರು 400-500 ಎಕರೆ ಎಂದಾಗ ಸಚಿವರು 15 ಎಕರೆ ಎಂದರೆ ಈ ಅಧಿಕಾರಿಗಳು ಕಾರ್ಖಾನೆಗಳ ಮಾಲೀಕರ ಜೊತೆ ಶಾಮೀಲಾಗಿ ಜನ ಹಾಳಾಗಿ ಹೋದರೂ ಪರವಾಗಿಲ್ಲ ಕಾರ್ಖಾನೆ ಮಾಲೀಕ ಬದುಕಿದರೆ ಸಾಕು ಎನ್ನುವಂಥ ನೀತಿ ಏನು ಇದೆ ಅದನ್ನು ಅವರದ್ದೇ ಆದ ಭಾಷೆಯಲ್ಲಿ ಖಂಡನೆ ಮಾಡದೇ ಇನ್ನೇನು ಮಾಡುವುದು? ಮಾನ್ಯ ಸಿಂಧ್ಯರವರು ಉಪಮುಖ್ಯಮಂತ್ರಿಗಳು ಇದ್ದಾರೆ. ಇದೊಂದು ಕೇಸು ಟೆಸ್ಟ್ ಕೇಸೆಂದು ತೆಗೆದುಕೊಳ್ಳಿ. ಇಲ್ಲದಿದ್ದರೆ ಅಧಿಕಾರಿಗಳನ್ನು ಹತೋಟಿಗೆ ತರಲಾಗುವುದಿಲ್ಲ. 400 ಎಕರೆ ಹಾಳಾಗಿದೆ ಎಂದು ಜವಾಬ್ದಾರಿಯುತವಾದ ಶಾಸಕರು ಹೇಳಿದ್ದಾರೆ. ನಿಮ್ಮ ವಿಶ್ವಾಸ ಇರುವಂತಹ ಒಬ್ಬ ಅಧಿಕಾರಿಗಳನ್ನು ಇಲ್ಲವೇ 3 ಜನ ಶಾಸಕರನ್ನು ಕಳುಹಿಸಿ ಹೋಗಿ ನೋಡಿಕೊಂಡು ಬಂದು ಅವರು 400-500 ಎಕರೆ ಎಂದು ಹೇಳಿದರೆ ಆ 15 ಎಕರೆ ಎಂದು ಹೇಳಿರುವ ಅಧಿಕಾರಿಯನ್ನು ಮನೆಗೆ ಕಳುಹಿಸಬೇಕಾಗುತ್ತದೆ. ಅವನು ಕಾರ್ಖಾನೆ ಮಾಲೀಕನ ಜೊತೆ ಶಾಮೀಲಾಗಿದ್ದಾನೆಂದು ಸ್ಪಷ್ಟವಾಗುತ್ತದೆ. ಒಂದೆರಡು ಕೇಸುಗಳನ್ನು ಟೆಸ್ಟ್ ಮಾಡಿದರೆ ಒಳ್ಳೆಯದು. ಯಾರೇ ಅಧಿಕಾರ ನಡೆಸಲಿ ಸಚಿವರು ಅವರು ಅಂದರೆ ಅಧಿಕಾರಿಗಳು ಕೊಟ್ಟಂತಹ ಉತ್ತರವನ್ನು ಇಲ್ಲಿ ಹೇಳಬೇಕಾಗುತ್ತದೆ. ಮುಂದೆ ಇಂತಹ ತಪ್ಪು ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಬರುತ್ತದೆ. ತಪ್ಪು ಮಾಹಿತಿ ಕೊಟ್ಟಾಗ ಅವರ ಕಿವಿ ಹಿಂಡುವುದಕ್ಕೆ ಬರುತ್ತದೆ.

ಉಪಾಧ್ಯಕ್ಷರು:- ಅವರು ಹೊಸದಾಗಿ ಬಂದಿದ್ದಾರೆ. ಹೊಸದಾಗಿ ಸಚಿವರಾಗಿದ್ದಾರೆ. ಅವರು ಏನು ಹೇಳಿದ್ದಾರೆ ನಾನು ಅಧಿಕಾರಿಗಳ ಹತ್ತಿರ ಮಾತನಾಡುತ್ತೇನೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಹೊಸ ಸಚಿವರಿಗೆ ಈ ಅಧಿಕಾರಿಗಳು ಮಿಸ್ ಗೈಡ್ ಮಾಡಬಾರದು. ಅವರು ಮನಬಂದಂತೆ ಯಾವನೋ ಕಾರ್ಖಾನೆ ಮಾಲೀಕನ ಜೊತೆ ಸೇರಿಕೊಂಡು ಇಷ್ಟ ಬಂದಂತೆ ಮಾಡಿದರೆ ಹೇಗೆ?

ಉಪಾಧ್ಯಕ್ಷರು:- ಸರಿಯಾದಂಥ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದೊಂದು ಟೆಸ್ಟ್ ಕೇಸ್ ಮಾಡಿ ಎಂದು ನಾನು ಹೇಳುವುದು. ಆಗ ಇದಕ್ಕೆ ಮಹತ್ವ ಬರುತ್ತದೆ. ಸದನಕ್ಕೆ ಗೌರವ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈ ಎಂಆರ್‌ಪಿಎಲ್‌ನಿಂದ ಮಂಗಳೂರು ಕಾರ್ಪೊರೇಷನ್‌ಗೆ 18 ಕೋಟಿ ರೂಪಾಯಿ ಸಾಲ ಕೊಡಬೇಕಾಗಿರುವುದು. ಇವತ್ತಿನವರೆಗೂ ಈ ಸರ್ಕಾರ ಅವರಿಂದ ಒಂದು ನಯಾಪೈಸೆಯನ್ನು ವಸೂಲು ಮಾಡಲಿಕ್ಕಾಗಲಿಲ್ಲ. ಇದಕ್ಕೆ ಕಾರಣವೇನೆಂದರೆ ಅವರು ಅಷ್ಟು ಬಲಾಢ್ಯವಾಗಿದ್ದಾರೆ. ತಮಗೆ ಏನು ಹೇಳುತ್ತಿದ್ದೇನೆಂದರೆ ಸಭಾಪತಿಯವರು...

ಉಪಾಧ್ಯಕ್ಷರು:- ಮಾನ್ಯ ಶಿವಣ್ಣನವರೇ, ಅವರೇನು ಹೇಳುತ್ತಿದ್ದಾರೆ ಕೇಳ್ರಿ.

ಶ್ರೀ ವಾಟಾಳ್ ನಾಗರಾಜ್:- ಈಗ ಸಭಾಪತಿಯವರು ಅವರ ಬೆಳೆ ನಾಶವಾಗಿರುವುದನ್ನು ಬೆಳಿಗ್ಗೆಯೇ ತಂದು ಸುಮಾರು ಐದು ನೂರು ಎಕರೆ ಬೆಳೆ ನಾಶವಾಗಿದೆ ಎಂದು ನಾವು ಹೇಳಿದ್ದೇವೆ. 15 ಎಕರೆ ಬೆಳೆ ನಾಶವಾಗಿದೆ ಎಂದು ಅವರು ಹೇಳಿದ್ದಾರೆ. ತಕ್ಷಣಕ್ಕೆ ಇವರು ಅಧಿಕಾರಿಯನ್ನು ಕಳುಹಿಸಿ ಅಲ್ಲಿ ಸರ್ವೆ ಮಾಡಿಸಿ ಸಂಬಂಧಪಟ್ಟಂಥ ಶಾಸಕರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಆ ಅನ್ಯಾಯ ನಡೆದಿರುವುದನ್ನು ಆ ರೈತರಿಗೆ ಪರಿಹಾರ ಮೊದಲು ಕೊಡಬೇಕು. ಜೊತೆಗೆ ಏನಾಗಿದೆ ಎಂದರೆ ಇದೇ ರೀತಿ ಪ್ರತಿವರ್ಷ ಆಗುತ್ತದೆ. ಆದ್ದರಿಂದ ಇದನ್ನು ತಡೆಯುವುದಕ್ಕೆ ಒಂದು ಪ್ರಾಮಾಣಿಕವಾದ ಪ್ರಯತ್ನವಾಗಬೇಕು. ಇತ್ತೀಚಿನ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಎಂದು ಹೇಳಿದರೆ ದಕ್ಷಿಣ ಕನ್ನಡ ಉತ್ತರ ಕನ್ನಡ ಎಂದು ಹೇಳಿದರೆ ಕರ್ನಾಟಕದ ಒಂದು ಸೌಂದರ್ಯವಾದ ಎರಡು ಜಿಲ್ಲೆಗಳು. ಈ ಜಿಲ್ಲೆಗಳು ಈಗ ಏನಾಗುತ್ತಿದೆ ಎಂದರೆ ಇಂಥ ಕಾರ್ಖಾನೆಗಳು ಇಂಥ ಕಲುಷಿತವಾದಂಥ ವಿಷ ಒದರುವ ಈ ಕಾರ್ಖಾನೆಗಳು ಬಂದು ಅಲ್ಲಿ ಬರೀ ಮೀನುಗಳು ಸಾಯುವುದು ಒಂದೇ ಅಲ್ಲ, ಮನುಷ್ಯರು ಸಾಯತಕ್ಕಂಥ ಕಾಲ

ಬಂದಿದೆ, ಆಮೇಲೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಭಾಷಣ ಮಾಡುವ ಹಾಗೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಈ ಹೆಸರು ಹೋಗುತ್ತದೆ. ದಕ್ಷಿಣ ಕನ್ನಡ ಎನ್ನುವ ಹೆಸರು ಹೋಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಹೆಸರು ಹೋಗುತ್ತದೆ. ಅದು ವಿಷದ ಜಿಲ್ಲೆಗಳಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ನೇರವಾಗಿ ನಿಮ್ಮ ಮೂಲಕ ಕೊಡುತ್ತಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ರೈರವರೇ, ಎರಡು ನಿಮಿಷದಲ್ಲಿ ಮುಗಿಸಿಬಿಡಿ. ಬೇಡಿಕೆ ಮೇಲೆ ಚರ್ಚೆ ಮುಂದುವರಿಯಬೇಕು.

ಶ್ರೀ ಬಿ.ರಮಾನಾಥ ರೈ:- ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೆಗಾ ಕೈಗಾರಿಕೆಗಳು ಬರುವಾಗ ಜನರ ಮನಸ್ಸಿನಲ್ಲಿ ಒಂದು ಸಂಶಯದ ವಾತಾವರಣ ಇದ್ದಂಥ ವಿಚಾರ ತಮಗೆಲ್ಲರಿಗೂ ಗೊತ್ತಿರುವಂಥ ವಿಚಾರ. ಕೆಲವು ಪ್ರತಿಭಟನೆಗಳೂ ಕೂಡ ನಡೆದಂಥದ್ದು ನಮಗೆಲ್ಲರಿಗೂ ಗೊತ್ತಿರುವ ವಿಚಾರ. ಈ ಮಧ್ಯೆ ಎಂಆರ್‌ಪಿಎಲ್ ಕಾರ್ಖಾನೆ ಅಲ್ಲ ಕಲುಷಿತವಾದಂಥ ನೀರು, ಏನು ನಮ್ಮ ಮಾನ್ಯ ಸಚಿವರು ಹೇಳಿದ್ದಾರೆ ತೈಲ ಮಿಶ್ರೀತ ಕಲುಷಿತ ನೀರು ಅದು ಪಂಪು ಕೆಟ್ಟರುವುದರಿಂದಾಗಿ ಅದು ಸೋರಿಕೆಯಾಗಿ ಭತ್ತದ ಪೈರಿಗೆ ಹೋಗಿ ತೊಂದೆಯಾಗಿದೆ ಎಂದು

ಉಪಾಧ್ಯಕ್ಷರು:- ತಾವು ಭಾಷಣ ಮಾಡುವ ಹಾಗೆ ಇಲ್ಲ. ಗಮನ ಸೆಳೆಯುವುದು ಅಷ್ಟೆ.

ಶ್ರೀ ಬಿ.ರಮಾನಾಥ ರೈ:- ಇದಕ್ಕೆ ಪೂರಕವಾದಂಥ ಒಂದು ವಾತಾವರಣ ನಿರ್ಮಾಣವಾಗಿ ಮುಂದಕ್ಕೆ ಇದರ ಪರಿಣಾಮ ಇನ್ನು ಗಂಭೀರ ಸ್ವರೂಪಕ್ಕೆ ಬದಲಾವಣೆಯಾಗುವಂಥ ಒಂದು ಸನ್ನಿವೇಶ ಇದೆ. ಆದ್ದರಿಂದಾಗಿ ಸರ್ಕಾರ ನೀವು ಈ ಒಂದು ಸೋರಿಕೆಯಾದಂಥ ಏನು ಕಲುಷಿತ ನೀರು ಅಲ್ಲಿ ಹೋಗಿ ಏನು ತೊಂದರೆಯಾಗಿದೆ, ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಮತ್ತು ಈ ಕಾರ್ಖಾನೆಯ ಜವಾಬ್ದಾರಿಯುತ ಜನರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂಥದ್ದು ಇದರ ಬಗ್ಗೆ ಸರ್ಕಾರವೇನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ?

+ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಇವತ್ತು ಈ ಒಂದು ಗಮನ ಸೆಳೆಯುವ ಸೂಚನೆಯಲ್ಲಿ ಬಂದಿರುವ ಉತ್ತರ ನೋಡಿದರೆ ಬಹುಶಃ ತಾವು ಆಡಳಿತ ಪಕ್ಷದಲ್ಲಿದ್ದರೂ ಇದನ್ನು ಒಪ್ಪುವುದಿಲ್ಲ. ಏಕೆಂದರೆ ಇದು ಸರಿಯಾದ ವರದಿ ಎಂದು ಹೇಳಿ ಈಗ ತಾವು ಸರ್ಟಿಫಿಕೇಟನ್ನು ಕೊಡುತ್ತಿದ್ದೀರಿ. ಆದರೆ ಮೊನ್ನೆ 20ನೇ ತಾರೀಖಿನಂದು ಕೆ.ಡಿ.ಪಿ. ಸಭೆ ನಡೆದಿತ್ತು. ಕೆಡಿಪಿ ಸಭೆಯಲ್ಲಿ ಸನ್ಮಾನ್ಯ ಜಯಪ್ರಕಾಶ್

ಹೆಗಡೆಯವರೂ ಇದ್ದರು. ಅದೇ ರೀತಿ ಸನ್ಮಾನ್ಯ ಮೊಹಿದ್ದೀನ್‌ರವರು ಸಹ ಇದ್ದರು. ಆ ಸಭೆಯಲ್ಲಿ ನಮ್ಮ ಸನ್ಮಾನ್ಯ ಸದಸ್ಯರಾಗಿರುವ ಸಭಾಪತಿಯವರು ಮತ್ತು ಕುಂಬ್ಳೆ ಸುಂದರರಾಯರೂ ಸಹಾ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಆಸ್ಕರ್ ಫರ್ನಾಂಡೀಸ್‌ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಸಾಧಾರಣ 300ರಿಂದ 500 ಎಕರೆ ಹಾಳಾಗಿದೆ ಎನ್ನುವ ವಿಚಾರವನ್ನು ಕೆಡಿಪಿ ಸಭೆಯಲ್ಲಿ ಹೇಳಿದರು. ಜಿಲ್ಲಾಧಿಕಾರಿಯವರ ಎದುರಿನಲ್ಲಿ ಹೇಳಿದರು. ಆದರೆ ಯಾರೂ ಮಾತನಾಡಿಲ್ಲ. ಬಹುಶಃ ಸಾರ್ವಜನಿಕವಾಗಿ ಎಲ್ಲರ ಎದುರಿನಲ್ಲಿ, ಎಲ್ಲಾ ಜನ ಪ್ರತಿನಿಧಿಗಳ ಎದುರಿನಲ್ಲಿ ಬಹುಶಃ ಸಚಿವರು ಇದಕ್ಕೆ ಉತ್ತರ ಕೊಡುತ್ತೀರಿ ಎಂದು ನಾನು ಭಾವಿಸುತ್ತೇನೆ. ಆಗ ಯಾರು ಮಾತನಾಡಿದವರು ಜಿಲ್ಲಾಧಿಕಾರಿ ಬಗ್ಗೆ ಸಹ ಈ ಬಗ್ಗೆ 15 ಎಕರೆ ಎನ್ನುವ ಮಾತನ್ನು ಹೇಳಲಿಲ್ಲ. ಇವತ್ತು ತಾವು ವಿಧಾನಸಭೆಗೆ 10-15 ಎಕರೆ ಎಂದು ಕೊಡುತ್ತೀರಿ. ಅಲ್ಲಿ ಜನಪ್ರತಿನಿಧಿಗಳ ಎದುರು 300 ಎಕರೆ ಅಥವಾ 500 ಎಕರೆಗೆ ತಾವು ಒಪ್ಪಿಗೆ ಕೊಟ್ಟಿರುತ್ತೀರಿ. ಈ ಉತ್ತರ ನೋಡಿದರೆ ತಮ್ಮ ಆಡಳಿತ ಯಾವ ರೀತಿ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಬಹುಶಃ ಇದರಲ್ಲಿ ಯಾರೋ ತಪ್ಪು ಮಾಡಿದ್ದಾರೆ. ಆ ತಪ್ಪನ್ನು ನಾವು ಹೊತ್ತುಕೊಳ್ಳುವುದು ಬೇಡ. ಎಲ್ಲಿ ತಪ್ಪಾಗಿದೆ ಅದನ್ನು ಸರಿಪಡಿಸುವ ಪ್ರಯತ್ನ ಮಾಡಬೇಕಾಗಿದೆ. ತಾವು ಕೊಟ್ಟಂಥ ವರದಿ ಸರಿಯಾಗಿದೆ ಎನ್ನುವ ಭಾವನೆಯನ್ನು ಈ ಸದನದಲ್ಲಿ ಮೂಡಿಸುವ ಒಂದು ವ್ಯವಸ್ಥೆಯಾಗುತ್ತಿದೆ. ಮತ್ತೊಂದು ವಿಚಾರ, ಏನು ತೈಲ ಸೋರಿಹೋಗಿದೆ ಎನ್ನುವ ವಿಚಾರ ಬಹಳ ಸಣ್ಣದಲ್ಲ. 500 ಎಕರೆ ಅಥವಾ 300 ಎಕರೆ ಪ್ರದೇಶ ಈ ತೈಲಸೋರಿಕೆಯಿಂದ ಹಾಳಾಗುವುದಾದರೆ ಅಲ್ಲಿಯತನಕ ಈ ಉದ್ದಿಮೆಗಳು ಎಂಆರ್‌ಪಿಎಲ್‌ನವರು ಏನು ಮಾಡುತ್ತಿದ್ದರು? ಇದೇನು ಮಕ್ಕಳಾಟಿಕೆಯೇ ಬಹುಶಃ ಇದರ ಬಗ್ಗೆ ಪ್ರಬಲವಾದ ಪ್ರತಿಭಟನೆ ಇರುವ ಸಂದರ್ಭದಲ್ಲಿಯೂ ಸಹ ಅಷ್ಟು ಬೇಜವಾಬ್ದಾರಿತನದಿಂದ ವರ್ತಿಸತಕ್ಕಂಥ....

ಉಪಾಧ್ಯಕ್ಷರು:- ತಾವು ಭಾಷಣ ಮಾಡುವುದು ಬೇಡ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಭಾಷಣವಲ್ಲ. ಅದಕ್ಕೆ ಸೀಮಿತವಾಗಿ ನಾನು ಮಾತನಾಡುತ್ತಿದ್ದೇನೆ. ಏನು ತೈಲಸೋರಿ ಹೋಗಿದೆ ಎಂದು ಬಹಳಷ್ಟು ಹಗುರವಾಗಿ ಉತ್ತರವನ್ನು ಕೊಡುತ್ತಿದ್ದಾರೆ. 500 ಎಕರೆ ಸಾಧಾರಣ 300ರಿಂದ 500 ಎಕರೆ ಪ್ರದೇಶವು ಹಾಳಾಗಬೇಕಾದರೆ ಕೃಷಿ ಮತ್ತು ಬಾವಿ ನೀರು ಹಾಳಾಗಬೇಕಾದರೆ ಈ ಎಂಆರ್‌ಪಿಎಲ್‌ನವರ ಜವಾಬ್ದಾರಿ ಎಷ್ಟಿದೆ? ಅದಕ್ಕೆ ಅವರನ್ನು ಜವಾಬ್ದಾರರನ್ನಾಗಿ ಮಾಡುತ್ತೀರೋ? ಅವರ ಮೇಲೆ ಪೋಲೀಸ್ ಕೇಸನ್ನು ಹಾಕುತ್ತೀರೋ? ಪಾಪ, ಬೇರೆಯವರ ಮೇಲೆ ಮಾತ್ರ ತಮ್ಮ ದಬ್ಬಾಳಿಕೆ ಅಥವಾ ಅಧಿಕಾರವನ್ನು ಚಲಾಯಿಸುತ್ತೀರೋ ಎನ್ನುವ ವಿಚಾರವನ್ನು ಮತ್ತು ಪರಿಹಾರವನ್ನು ಏನು ಕಾನೂನು ಕ್ರಮವನ್ನು ಕೈಗೊಳ್ಳುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಸದನದಲ್ಲಿ ತಾವು ಹೇಳಬೇಕಾಗುತ್ತದೆ. ಮತ್ತು ಯಾರು ತಪ್ಪು ವರದಿಯನ್ನು ಕೊಟ್ಟಿದ್ದಾರೆ, ಅವರೂ ಸಹಾ

ಈ ಒಂದು ವರದಿಯನ್ನು ಯಾರು ಎಂಆರ್‌ಪಿಎಲ್‌ನವರೊಂದಿಗೆ ಈ ವರದಿಯನ್ನು ಕೊಟ್ಟ ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನುವ ಆಪಾದನೆಯನ್ನು ಕೂಡ ನಾವು ಮಾಡುತ್ತಿದ್ದೇವೆ. ಇದರ ಬಗ್ಗೆಯೂ ಕೂಡ ತನಿಖೆಯನ್ನು ಮಾಡಿಸಬೇಕಾಗುತ್ತದೆ.

+ಶ್ರೀ ಐ.ಎಂ.ಜಯರಾಮಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಇವತ್ತು ಎಂಆರ್‌ಪಿಎಲ್ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಏನು ಒಂದು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಸಿಗುತ್ತದೆ ಎನ್ನುವ ಭರವಸೆಯಿಂದ ಶುರುಮಾಡಿದ್ದಾರೆ. ಪ್ರತಿಯೊಂದು ಹಂತಹಂತದಲ್ಲಿ ಅವರು ಕಾನೂನನ್ನು ಕೈಯಲ್ಲಿ ತೆಗೆದುಕೊಂಡು ಅಧಿಕಾರಿಗಳು ಮತ್ತು ರಾಜಕಾರಣಿಗಳೊಟ್ಟಿಗೆ ಶಾಮೀಲಾದ ರೀತಿಯಲ್ಲಿ ಇದಾಗುತ್ತಿದೆ. ಮೊನ್ನೆ ಮುಖ್ಯಮಂತ್ರಿಗಳ ಕಛೇರಿಯಲ್ಲಿ ಸ್ಟೇಟ್‌ಮೆಂಟನ್ನು ಕೊಟ್ಟರು. ಈ ತೈಲವನ್ನು ಒಳ್ಳೆಯ ರೀತಿಯಲ್ಲಿ ಶುದ್ಧೀಕರಿಸಿ ಅದನ್ನು ಸಮುದ್ರಕ್ಕೆ ಬಿಡುತ್ತೇವೆ ಎಂದು ಹೇಳಿದವರು ಅದು ಮಧ್ಯದಲ್ಲಿ ಪುನಃ ಈ ತರಹದ ಅಲ್ಲಿ ನಿಜವಾಗಿಯೂ ಆಗುವುದು ಮತ್ತು ಅಲ್ಲಿ ಕೊಟ್ಟಂಥ ರಿಪೋರ್ಟನ್ನು ತಾವು ಸರಿಯಾಗಿ ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಮುಖ್ಯವಾಗಿ ಅಲ್ಲಿ ನೌಕರರಿಗೆ 500ರಿಂದ 700 ರೂಪಾಯಿ ಸಂಬಳವನ್ನು ಕೊಟ್ಟು ಜನರನ್ನು ಯಾವ ರೀತಿ ಅಂದರೆ ಬಹಳ ಒಂದು ಹೀನಾಯವಾಗಿ ಪೋಸ್ಟ್ ಗ್ರಾಜ್ಯುಯೇಷನ್ ಇದ್ದವರನ್ನು ನೋಡುವಂಥ ಮಾನವೀಯ ಒಂದು ಮೌಲ್ಯವನ್ನು ಕಳೆದುಕೊಂಡಂಥ ಒಂದು ಸಂಸ್ಥೆ ಎಂದು ಹೇಳಿದರೆ ತಪ್ಪಾಗಲಾರದು. ಅವರು ನೀರು ತರುವಾಗಲೂ ಅಷ್ಟೆ, ಸಾರ್ವಜನಿಕರ ರಸ್ತೆಯನ್ನೂ ಸಹ ಕಡಿದು ಅಲ್ಲಿ ಚರಂಡಿ ಮಾಡಿಕೊಂಡು ಹೀಗೆ ಪ್ರತಿಯೊಂದು ಹಂತ ಹಂತದಲ್ಲೂ ಸಹ ಜನರ ಬಗ್ಗೆ ಅಥವಾ ನಮ್ಮ ಸೌತ್ ಕೆನರಾದ ಪರಿಸರದ ಬಗ್ಗೆ ಏನು ಆಲೋಚನೆ ಮಾಡದೆ ಪ್ರತಿಯೊಂದು ಹಂತ ಹಂತದಲ್ಲಿಯೂ ಸರ್ಕಾರಕ್ಕೆ ಮೋಸ ಮಾಡಿ ಜನರಿಗೂ ಮೋಸ ಮಾಡುವಂಥ ಪ್ರವೃತ್ತಿ ಇದ್ದಂಥ ಉದ್ದಿಮೆ ಎಂದು ನನ್ನ ತಿಳಿವಳಿಕೆಗೆ ಬಂದಿದೆ. ಅದರಲ್ಲೂ ನಮ್ಮ ಶಾಸಕರಾದ ಕುಂಬ್ಳೆ ಸುಂದರರಾಯರು ಅವರ ಮೇಲೂ ಸಹ ರಾಜಕಾರಣ ಮಾಡಲಿಕ್ಕೋಸ್ಕರವಾಗಿ ಕೆಲವು ಮುಖಂಡರುಗಳನ್ನು ಕಟ್ಟಿಕೊಂಡು ಅವರಿಗೇ ಕಂಟ್ರಾಕ್ಟ್ ಕೊಟ್ಟುಕೊಂಡು ಅವರು ಅವರ ಪರವಾಗಿಯೇ ಇವರ ವಿರುದ್ಧವಾಗಿ ಹೋರಾಟ ಮಾಡುವಂಥ ಒಂದು ಶಕ್ತಿಯನ್ನು ರೂಪಿಸಿಕೊಂಡು ಅವರಿಗೂ ಸಹ ಸರಿಯಾಗಿ ಇವತ್ತು ಕೆಲಸ ಮಾಡುವಂಥ ಒಂದು ಅವಕಾಶ ಕೊಡದೇ ಇದ್ದಂಥ ಒಂದು ಸಂಸ್ಥೆ ಎಂದರೆ ನನ್ನ ಪ್ರಕಾರ ಎಂಆರ್‌ಪಿಎಲ್ ಆಗಿದೆ. ತಾವು ದಯಮಾಡಿ ಬಂದು ಸರಿಯಾಗಿ ಸೂಕ್ತ ಕ್ರಮ ತೆಗೆದು ಅವರು ಹಿಂದೆ ಕೊಟ್ಟಂಥ ಆಶ್ವಾಸನೆ, ಈಗ ನಡೆಯುವುದೇನು ಎಂದು ಸರಿಯಾಗಿ ಪರಿಶೀಲಿಸಬೇಕೆಂದು ತಮ್ಮ ಮೂಲಕ ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

+ ಶ್ರೀ ಕೆ.ಜಯರಾಮಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಮೊನ್ನೆ ಏನು 500 ಎಕರೆ ಪ್ರದೇಶಕ್ಕೆ ತೈಲ ನುಗ್ಗಿ ಪೈರಿಗೆ ಏನು ತೊಂದರೆಯಾಗಿದೆ ಅಲ್ಲಿ ಇನ್ನು ಮುಂದೆ 10-15 ವರ್ಷಗಳವರೆಗೆ ಯಾವುದೇ ಸಾಗುವಳಿ ಮಾಡುವುದಕ್ಕೆ ಸಾಧ್ಯತೆಯಾಗುತ್ತಿಲ್ಲ.

ಉಪ್ಪುನೀರು ತೋಡಿನ ಮುಖಾಂತರ ಆ ಗದ್ದೆಯಲ್ಲಿ ಒಳಗೆ ಬಂದರೆ ಪೈರು ಬೆಳೆಯುವುದಿಲ್ಲ. ಇದು ನಮ್ಮ ಅನುಭವ. ಆದ್ದರಿಂದ ಈ ತೈಲ ಸೋರಿಕೆ ಯಾವುದು ಗದ್ದೆಯ ಒಳಗೆ ಬಂದಿದೆ, ಇದ ಇನ್ನೂ ಕೆಲವಾರು ವರ್ಷಗಳವರೆಗೆ ಅದರಲ್ಲಿ ಸಾಗುವಳಿ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಸರ್ಕಾರ ಅವರಿಗೆ ಶಾಶ್ವತವಾದಂಥ ಒಂದು ಪರಿಹಾರವನ್ನು ಕೊಡಬೇಕು. ಇನ್ನು ಅಲ್ಲಿ ಸಂತ್ರಸ್ತರ ಸಮಸ್ಯೆಯಂತೂ ಪರಿಹಾರವಾಗಲಿಲ್ಲ. ಸರ್ಕಾರದಲ್ಲಿ ಅದು ಇನ್ನು ನೆನೆಗುದಿಗೆ ಬಿದ್ದಿದೆ. ಎಷ್ಟೋ ಸಮಸ್ಯೆಗಳು, ಎಷ್ಟೋ ವಿಚಾರಗಳು ಬರುತ್ತಿತ್ತು. 'ಮೂಡಾ'ದ ಸಭೆಯಲ್ಲಿ ನಾವು ಎಂಆರ್‌ಪಿಎಲ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಹತ್ತಿರ ವಿಚಾರಣೆಗೆ ತೆಗೆದುಕೊಂಡಾಗ 15 ಕೋಟಿ ರೂಪಾಯಿ ಇನ್ನು ಮಂಗಳೂರಿನ ಮೂಡಾ ಸಂಸ್ಥೆಗೆ ಕೊಡಲಿಲ್ಲ. ದಯವಿಟ್ಟು ಸರ್ಕಾರ ಅದರ ಬಗ್ಗೆ ನಿಗಾ ವಹಿಸಬೇಕು. ಅವರು ಹಾರಿಕೆಯ ಉತ್ತರವನ್ನು ಕೊಡುತ್ತಿದ್ದಾರೆ. ಅವರು ಪ್ರಭಲರಾಗಿದ್ದಾರೆ. ಅವರ ಹತ್ತಿರ ಬೇಕಾದಷ್ಟು ಹಣ ಉಂಟು. ಕೋರ್ಟು ಕಛೇರಿಗೆ ಹೋಗುತ್ತಿದ್ದಾರೆ. ಒಬ್ಬ ಸಾಮಾನ್ಯನ ಜೋಪಡಿಯನ್ನು ಕಿತ್ತುಹಾಕಿದ್ದಾರೆ. ನಾನು ವಿನಂತಿ ಮಾಡುತ್ತಿದ್ದೇನೆ. ಈಗ ಕಾನೂನು, ನ್ಯಾಯ ಸಾಮಾನ್ಯನಿಗೂ ಒಂದೇ, ಕಂಪನಿಗೂ ಒಂದೇ. ಇದು ಬದಲಾವಣೆಯಾಗಬಾರದು. ದಯವಿಟ್ಟು ಸರ್ಕಾರದವರು ಮಂಗಳೂರು ಮಹಾನಗರಪಾಲಿಕೆಗೆ ಬರುವ ಹಣವನ್ನು ಕೊಡಿಸಬೇಕಾಗುತ್ತದೆ.

04-00 ಪಿ.ಎಂ

ಶ್ರೀ ಎ.ರುಕ್ಮಯ್ಯ ಪೂಜಾರಿ:- ಮಾನ್ಯ ಉಪಾಧ್ಯಕ್ಷರೇ, ನಮ್ಮ ಜಿಲ್ಲೆಯಲ್ಲಿ ಕೊಜೆಂಟ್ರಿಕ್ಸ್ ಮತ್ತು ಎಂಆರ್‌ಪಿಎಲ್ ಇವೆರಡೂ ರಾಕ್ಷಸನ ರೀತಿಯಲ್ಲಿ ಬಂದಿದೆ. ಇದು ಬರುವಾಗಲೇ ನಮ್ಮವರಿಗೆ ಹೆದರಿಕೆ ಆಗಿದೆ. ಹೆದರಿಕೆ ಆಗಿ ವಿರೋಧ ಮಾಡಿದ್ದಾರೆ, ಸತ್ಯಾಗ್ರಹ ಎಲ್ಲಾ ಮಾಡಿದ್ದಾರೆ. ಆದರೂ ಕೂಡ ಇವತ್ತು ಆ ಹೆದರಿಕೆ ಸ್ತಬ್ಧ ಆಗಿದೆ. ಮೊನ್ನೆ ತೈಲ ಸೋರಿಕೆಯಿಂದಾಗಿ 300, 400 ಎಕರೆ ಕೃಷಿ ಹಾಳಾಗಿದೆ. ಅಲ್ಲಿ ಕೃಷಿ ಮಾಡಲಿಕ್ಕೆ ಸಾಧ್ಯವಿಲ್ಲ. ಅದು ಮಾತ್ರ ಅಲ್ಲ ಇನ್ನು ಮುಂದೆ ಜನರ ಜೀವಕ್ಕೆ ಏನಾಗುತ್ತದೆ ಎಂದು ಹೇಳಲಿಕ್ಕೆ ಸಾಧ್ಯ ಇರುವುದಿಲ್ಲ. ಆದ್ದರಿಂದಾಗಿ ಯಾರಿಗೆ ನಷ್ಟ ಆಗಿದೆ, ಅವರಿಗೆ ನಷ್ಟ ಪರಿಹಾರ ಕೊಡಬೇಕು ಮತ್ತು ಮುಂದೆ ಜನರಿಗೆ ಆಗದ ರೀತಿಯಲ್ಲಿ ಆರೋಗ್ಯ ಇಲಾಖೆಯವರನ್ನು ಕಳುಹಿಸಿ ಅದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್.ಶಿವಣ್ಣ:- ಮಾನ್ಯ ಉಪಾಧ್ಯಕ್ಷರೆ, ಇದು ಆದಂತಹ ಘಟನೆ ಅನಿರೀಕ್ಷಿತ. ಆದರೆ ಆದಂತಹ ಘಟನೆ ಮಾತ್ರ ನಿಜ, ಇಲ್ಲ ಎಂದು ಸರ್ಕಾರ ಎಲ್ಲಾ ಸುಳ್ಳು ಹೇಳಿಲ್ಲ. ನಿಜ, ಈ ಘಟನೆಯಾಗಿದೆ. ಆದರೆ ಇವತ್ತು ನಮ್ಮ ಪರಿಸರ ಮಾಲಿನ್ಯದ ಅಧಿಕಾರಿಗಳು ಮತ್ತು ಮಂಗಳೂರು ಜಿಲ್ಲಾಧಿಕಾರಿಗಳು ಅವರೂ ಕೂಡ ಸ್ಥಳ ಪರಿಶೀಲನೆ ಮಾಡಿ 20ರಿಂದ 25 ಎಕರೆ ಹಾನಿ ಆಗಿದೆ ಎಂದು ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ಮಂತ್ರಿಗಳು ಉತ್ತರ ಹೇಳುವ ಮಟ್ಟಿಗೆ ಸುಮ್ಮನೆ ಇರದಿದ್ದರೆ ಅವರು ಹೇಗೆ ಉತ್ತರ ಕೊಡಬೇಕು?

ಶ್ರೀ ಎಸ್.ಶಿವಣ್ಣ:- ಆದರೂ ಕೂಡ ಸದಸ್ಯರ ಎಲ್ಲಾ ಭಾವನೆಗಳನ್ನು ಕೇಳಿಕೊಂಡು ಮತ್ತೊಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿಕೊಟ್ಟು ಅಲ್ಲಿ ಸ್ಥಳ ಪರಿಶೀಲನೆ ಮಾಡಿ ಎಷ್ಟು /ಎಕರೆ ಹಾನಿ ಆಗಿದೆ ಎಂದು ತಿಳಿದುಕೊಂಡು ಅವು ರೈತರಿಗೆ ಎಂಆರ್‌ಪಿಎಲ್ ಕಾರ್ಖಾನೆಯಿಂದ ಒಂದು ಯೋಗ್ಯವಾದ ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಬಿ.ರಮಾನಾಥ ರೈ:- ಆದರೆ ಕಾನೂನು ಕ್ರಮ ಏನು ತೆಗೆದುಕೊಳ್ಳುತ್ತೀರಿ?

(ಗೊಂದಲ)

ಉಪಾಧ್ಯಕ್ಷರು:- ಮಂತ್ರಿಗಳು ಹೇಳಿದ್ದಾರೆ. ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ರಮಾನಾಥ ರೈ:- ಕಾನೂನು ಕ್ರಮ ಏನು ತೆಗೆದುಕೊಳ್ಳುತ್ತಾರೆ?

(ಗೊಂದಲ)

ಉಪಾಧ್ಯಕ್ಷರು:- ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಕೂಡಿ, ಈಗ ಮಾನ್ಯ ಸಗೀರ್ ಅಹಮದ್ ಅವರು ಕೇಳುತ್ತಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ....

ಶ್ರೀ ಎ.ರುಕ್ಮಯ್ಯ ಪೂಜಾರಿ:- ಮಾನ್ಯ ಸಚಿವರಾದ ಶ್ರೀ ಜಯಪ್ರಕಾಶ್ ಹೆಗಡೆ ಅವರು ಸ್ಥಳಕ್ಕೆ ಹೋಗಿದ್ದಾರೆ. ಸ್ಥಳ ತನಿಖೆ ಮಾಡಿದ್ದಾರೆ, ಅವರೇನು ಹೇಳುತ್ತಾರೆ ಕೇಳಿ.

ಶ್ರೀ ಸಿದ್ಧರಾಮಯ್ಯ:- ಜಿಲ್ಲಾಧಿಕಾರಿಗಳು ಈ ಸಂಬಂಧದಲ್ಲಿ 19ನೇ ತಾರೀಖು ವರದಿ ಕೊಟ್ಟಿದ್ದಾರೆ. ಇದಾದ ಮೇಲೆ ಕೂಡ ಬೆಂಗಳೂರಿನಿಂದ ಪರಿಸರ ಅಧಿಕಾರಿಗಳನ್ನು ಮಂಡಲಿಯಿಂದ ಕಳಿಸಿಕೊಟ್ಟಿದ್ದಾರೆ. ಅವರೂ ವರದಿ ತಂದು ಕೊಟ್ಟಿದ್ದಾರೆ. ಸುಮಾರು 20ರಿಂದ 25 ಎಕರೆಯಷ್ಟು ತೈಲ ಮಿಶ್ರಿತ ನೀರು ಹರಿದಿದೆ, ಅಲ್ಲಿ ಬೆಳೆ ಹಾನಿ ಆಗಿದೆ ಎನ್ನತಕ್ಕದ್ದನ್ನು ಅವರು ಹೇಳಿದ್ದಾರೆ. ಇದರ ಮೇಲೆ ಇನ್ನೂ ಹಿರಿಯ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇನೆ. ಅಲ್ಲಿ ಇನ್ನೂ ಏನು ನಷ್ಟ ಆಗಿದೆ ಎನ್ನತಕ್ಕದ್ದರ ಬಗ್ಗೆ ವರದಿಯನ್ನು ತರಿಸಿಕೊಂಡು, ಸಂಬಂಧಪಟ್ಟ ಕಾರ್ಖಾನೆಯವರು ನಷ್ಟ ಆಗಿರುವಂತಹ ರೈತರಿಗೆ ಅದರ ಪರಿಹಾರವನ್ನು ಕೊಡಿಸುವುದಕ್ಕೆ ಅವರ ಜೊತೆ ಮಾತನಾಡಿದ್ದಾರೆ, ಪರಿಹಾರ

ಕೊಡುವುದಕ್ಕೆ ಅವರೂ ಮುಂದೆ ಬಂದಿದ್ದಾರೆ. ಅದಕ್ಕೆ ಇನ್ನೂ ಅಗತ್ಯ ಇದ್ದರೆ ಮಂತ್ರಿಗಳೇ ಅಲ್ಲಿ ಸ್ಥಳಕ್ಕೆ ಸ್ವತಃ ಹೋಗಿ ಹಿರಿಯ ಅಧಿಕಾರಿಗಳ ಜೊತೆ ಚರ್ಚೆಮಾಡಿ ಅಲ್ಲಿ ಏನು ನಷ್ಟ ಆಗಿದೆ, ಪರಿಹಾರ ಕೊಡಿಸತಕ್ಕ ಕೆಲಸವನ್ನು ಮಾಡುತ್ತಾರೆ. ಬಹುಶಃ ಅವರ ಎಲ್ಲಾ ಭಾವನೆಗಳೂ ಸರ್ಕಾರಕ್ಕೆ ಅರ್ಥ ಆಗಿದೆ. ನಿಮ್ಮ ಭಾವನೆಗಳು ಸರ್ಕಾರಕ್ಕೆ ಅರ್ಥ ಆಗಿದೆ.

ಶ್ರೀ ಐ.ಎಂ.ಜಯರಾಮ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೆ, ಚೀಫ್ ಮಿನಿಸ್ಟರ್ ಕೃಷ್ಣಾದಲ್ಲಿ ಹೇಳಿದ್ದಾರೆ, ನೀರು ಹೋಗುತ್ತದೆ, ಕೃಷಿ ಮಾಡಲಿಕ್ಕೆ ಇದರಿಂದ ಯಾವುದೇ ತರಹದ ಅನ್ಯಾಯ ಆಗುವುದಿಲ್ಲ. ನಾವು ಅದನ್ನು ಶುದ್ಧೀಕರಣ ಮಾಡಿ ನೀರನ್ನು ಕಳುಹಿಸುತ್ತೇವೆ ಎಂದು. ಇವತ್ತಿನದು ನೋಡಿ. ಇದು ಬಹಳ ದೊಡ್ಡ ಮಟ್ಟದಲ್ಲಿ 1992ರಿಂದ 96ರವರೆಗೆ ಹೆಜ್ಜೆ ಹೆಜ್ಜೆಗೂ ದಕ್ಷಿಣ ಕನ್ನಡ ಜಿಲ್ಲೆಯ ಜನರನ್ನು ಮೋಸ ಮಾಡಿ, ದ್ರೋಹ ಮಾಡುವಂತಹ ಒಂದು ಯೋಜನೆ ನಡೆಯುತ್ತಿದೆ. ಇವತ್ತು ನಿಮ್ಮ ಕಣ್ಣೆದುರಿನಲ್ಲಿ ನೋಡುತ್ತಿದ್ದೀರಿ. ಇನ್ನೂ ನೀವು ಕಣ್ಣು ಮುಚ್ಚಿಕೊಂಡರೆ, ಇವತ್ತು ಕೃಷಿ ಹಾಳಾಗುತ್ತದೆ. ಈ ಸರ್ಕಾರ ಕಾರ್ಖಾನೆ ಮಾಲೀಕನ ಜೊತೆ ಶಾಮೀಲಾಗಿದೆಯೇ?

(ಗೊಂದಲ)

ಉಪಾಧ್ಯಕ್ಷರು:- ತಾವು ಕೂಡಿ ಅವರು ಹೇಳುತ್ತಾರೆ.

ಶ್ರೀ ಸಿದ್ಧರಾಮಯ್ಯ:- ಸರ್ಕಾರ ಯಾವುದೇ ಕಾರ್ಖಾನೆಯ ಮಾಲೀಕನ ಜೊತೆ ಶಾಮೀಲಾಗತಕ್ಕ ಪ್ರಶ್ನೆ ಇಲ್ಲ. ಒಂದು ವೇಳೆ ಅದು ವರದಿಯಿಂದ ಕಂಡು ಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆ. ಇವತ್ತು ಆಗಿರತಕ್ಕ ಹಾನಿ ಬಗ್ಗೆ ಅಲ್ಲಿ ಸ್ಥಳ ಪರಿಶೀಲನೆ ಮಾಡಿ, ಈಗಾಗಲೇ ವರದಿ ಬಂದಿದೆ. ಇನ್ನೂ ಇವರ ಸಮಾಧಾನಕ್ಕೋಸ್ಕರ ಮಾನ್ಯ ಸದಸ್ಯರು ಅವರು ಸಮಾಧಾನ ಆಗಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಹಿರಿಯ ಅಧಿಕಾರಿಗಳೂ ಹೋಗುತ್ತಾರೆ. ಮಾನ್ಯ ಮಂತ್ರಿಗಳೂ ಸ್ಥಳಕ್ಕೆ ಭೇಟಿ ಕೊಡುತ್ತಾರೆ. ಬಂದು ಎಷ್ಟು ನಷ್ಟ ಆಗಿದೆ ಎಂದು ಕಾರ್ಖಾನೆಯವರಿಂದ ಅದರ ಬಗ್ಗೆ ಪರಿಹಾರವನ್ನು ಕೊಡಿಸತಕ್ಕಂಥ ಕೆಲಸವನ್ನು ಮಾಡುತ್ತಾರೆ. ಯಾವುದೇ ಕಾರ್ಖಾನೆಯವರ ಜೊತೆ ಈ ಸರ್ಕಾರ ಶಾಮೀಲಾಗಬೇಕಾದಂತಹ ಅಗತ್ಯ ಇಲ್ಲ. ರೈತರು ಮುಖ್ಯ. ಈ ಸರ್ಕಾರಕ್ಕೆ. ಸರ್ಕಾರ ರೈತರ ಪರವಾಗಿ ನಿಲ್ಲುತ್ತದೆ ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಬಯಸುತ್ತೇನೆ.

ಶ್ರೀ ಯು.ಆರ್.ಸಭಾಪತಿ:- ಅವರು ಮಾಡಿದ ಅನ್ಯಾಯಕ್ಕೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಉಪಾಧ್ಯಕ್ಷರು:- ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಈಗ ಕುಳಿತುಕೊಳ್ಳಿ. ಈಗ ಯಾವುದೇ ವಿಚಾರ ಇಲ್ಲ. ಡಿಮ್ಯಾಂಡ್ ಮೇಲೆ ಮಾನ್ಯ ಸಗೀರ್ ಅಹಮದ್ ಷವರು ಮಾತನಾಡುತ್ತಾರೆ.

ಶ್ರೀ ಬಿ.ರಮಾನಾಥ ರೈ:- ತೈಲ ಮಿಶ್ರಿತ ನೀರು ಹರಿದಿದೆ ಎಂದು ಒಪ್ಪಿಕೊಂಡಿದ್ದಾರೆ. ಕೃಷಿಗೆ ತೊಂದರೆ ಆಗಿದೆ ಎಂದು ಹೇಳತಕ್ಕವರ ಬಗ್ಗೆ ಏನು ಕ್ರಮ, ಕಾನೂನಿನ ಕ್ರಮ ತೆಗೆದುಕೊಳ್ಳುತ್ತಾರೆ.

(ಗೊಂದಲ)

ಉಪಾಧ್ಯಕ್ಷರು:- ಜುರಾಲಾ ಬಗ್ಗೆ ಅವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ ಕೂಡಿ.

ಶ್ರೀ ವಾಟಾಳ್ ನಾಗರಾಜ್:- ಸಾರ್ ಈಗ ನಾವು ಮೊನ್ನೆಯ ದಿವಸ ಜುರಾಲಾ ಅಣೆಕಟ್ಟಿನ ಬಗ್ಗೆ ಮಾನ್ಯ ಸಂಬಂಧಪಟ್ಟಂತಹ ಸಚಿವರು ಎಲ್ಲಾ ವಿರೋಧ ಪಕ್ಷದ ಮುಖಂಡರುಗಳ ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ.....

ಉಪಾಧ್ಯಕ್ಷರು:- ತಾವು ಕೂಡಿ ಸಗೀರ್ ಅಹಮದ್ ಅವರೇ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಪ್ರಶ್ನೆ ಕೇಳಿದಂತಹ ನಮ್ಮ ಕಾಂಗ್ರೆಸ್ ಮುಖಂಡರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಜುರಾಲಕ್ಕೆ ಹೋಗಿ ಬಂದು ಅದರ ಪ್ರಸ್ತಾವ ಮಾಡಿದವನು ನಾನು ಇಲ್ಲಿಯೇ ಕುಳಿತಿದ್ದೇನೆ.

ಉಪಾಧ್ಯಕ್ಷರು:- ವಾಟಾಳ್ ಅವರೇ, ತಾವು ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್:- ಸಾರ್ ನನ್ನನ್ನು ನೀವು ದಾರಿ ತಪ್ಪಿಸುತ್ತಿದ್ದೀರಿ.

ಉಪಾಧ್ಯಕ್ಷರು:- ನಾನೇನೂ ದಾರಿ ತಪ್ಪಿಸುತ್ತಿಲ್ಲ. ನೀವೇ ತಪ್ಪಿ ಹೋಗಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಜುರಾಲಾ ಅಣೆಕಟ್ಟಿನಿಂದ ನಮಗೇನು ಮುಳುಗಡೆ ಆಗಿ ಕರ್ನಾಟಕದ ಪ್ರದೇಶ ಏನು ಮುಳುಗಡೆ ಆಗುತ್ತಿದೆ, ಈ ಬಗ್ಗೆ ಸರ್ಕಾರ ತನ್ನ ಸ್ಪಷ್ಟ ನೀತಿಯನ್ನು ಸ್ಪಷ್ಟಪಡಿಸಬೇಕು ಎನ್ನತಕ್ಕದ್ದನ್ನು ಹತ್ತಾರು ಸಾರಿ ಹೇಳಿದ್ದೇವೆ. ಯಾವುದೇ ಕ್ರಮವನ್ನು ಸರ್ಕಾರ ತೆಗೆದುಕೊಂಡಿಲ್ಲ ತಮಗೆ ಹೇಳತಕ್ಕದ್ದು. ಮೊನ್ನೆ ಇದನ್ನು ವಿರೋಧ ಪಕ್ಷದ ಮುಖಂಡರ ಸಭೆಯನ್ನು ಕರೆದಿದ್ದರು. ಮಾನ್ಯ ನಮ್ಮ ಭಾರೀ ನೀರಾವರಿ ಸಚಿವರು ಕರೆದಿದ್ದರು. ಅಲ್ಲೂ ಏನೂ ತೀರ್ಮಾನ ಆಗಲಿಲ್ಲ. ಈ ಸದನದಲ್ಲಿ ಒಂದು ನಿರ್ಣಯ ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ. ನಿರ್ಣಯ ಏನು ಅಂದರೆ 25ನೆಯ ತಾರೀಖು ಅವರು ಉದ್ಘಾಟನೆ ಮಾಡುತ್ತಿದ್ದಾರೆ. ಉದ್ಘಾಟನೆ ಮಾಡತಕ್ಕದ್ದು ನಿಲ್ಲಬೇಕು. ಅದನ್ನು ಕೇಂದ್ರಕ್ಕೆ ಒತ್ತಾಯ ಮಾಡಿ ನಾವು ಕರ್ನಾಟಕ ಸರ್ಕಾರದ ಪರವಾಗಿ ಸರ್ವಾನುಮತದ ನಿರ್ಣಯವನ್ನು ಮಾಡಬೇಕೆಂದು ಹೇಳಿ ನಾನು • ಒತ್ತಾಯ ಮಾಡುತ್ತಿದ್ದೇನೆ. ಸುಮ್ಮನೆ ಅವರು ಒಂದು ಹೇಳಿಕೆಯನ್ನು ಕೊಟ್ಟರೆ ಆಗುವುದಿಲ್ಲ. ನಾನು ಧರಣಿ ಮಾಡಬೇಕಾಗುತ್ತದೆ, ಹೇಳುತ್ತೇನೆ ಕೇಳಿ.

ಉಪಾಧ್ಯಕ್ಷರು:- ಈಗ ತಾವು ಕೂಡಿ, ಸರ್ಕಾರದ ಪರವಾಗಿ ಹೇಳಿಕೆ ಕೊಡುತ್ತಾರೆ.

ಶ್ರೀ ಕೆ.ಎನ್.ನಾಗೇಗೌಡ:- ನಾಗರಾಜ್ ಅವರೇ, ಒಂದು ನಿಮಿಷ ತಾವು ಹೇಳಿದ್ದು ನಾವು ಗಮನಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಬಹಳ ಅನ್ಯಾಯ ಆಗಿದೆ. ಸರ್ಕಾರ ಇದರ ಬಗ್ಗೆ ಕ್ರಮ ಇದುವರೆಗೆ ಕೈಗೊಂಡಿಲ್ಲ.

ಉಪಾಧ್ಯಕ್ಷರು:- ಅದನ್ನೇ ಹೇಳುತ್ತಿದ್ದಾರೆ. ನೀವು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇವತ್ತು 22ನೇ ತಾರೀಖು ಆಯಿತು. 25ನೆಯ ತಾರೀಖಿಗೆ ಅವರು ಉದ್ಘಾಟನೆ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು:- ಅದನ್ನು ಅವರು ಹೇಳುತ್ತಾರೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ,

(ಗೊಂದಲ)

ಶ್ರೀ ಬಿ.ರಮಾನಾಥ ರೈ:- ಬಹಳ ಗಂಭೀರ ಪರಿಸ್ಥಿತಿ ಇದೆ.

ಉಪಾಧ್ಯಕ್ಷರು:- ತಾವು ಕೂಡಿ ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಬಿ.ರಮಾನಾಥ ರೈ:- ಸನ್ಮಾನ್ಯ ಉಪಾಧ್ಯಕ್ಷರೆ, ಎಂಆರ್‌ಪಿಎಲ್, ಮೆಗಾ ಇಂಡಸ್ಟ್ರೀಸ್ ನಮ್ಮ ಜಿಲ್ಲೆಗೆ ಬರತಕ್ಕ ಸಂದರ್ಭದಲ್ಲಿ ಈ ಒಂದು ಕೈಗಾರಿಕೆಯಲ್ಲಿ ಈ ಸೋರಿಕೆಯಿಂದಾಗಿ ಏನಾದರೂ ತೊಂದರೆ ಆಗಿರುವ ಬಗ್ಗೆ ತಾವು ಕಠಿಣವಾದಂತಹ ನಿಲುವನ್ನು ತಾಳದೇ ಇದ್ದರೆ ಮುಂದೆ ಸಮಸ್ಯೆ ಪರಿಹಾರ ಆಗುವುದಿಲ್ಲ.

ಉಪಾಧ್ಯಕ್ಷರು:- ತಾವು ಕೂಡಿ. ಸ್ಟೇಟ್‌ಮೆಂಟ್ ಮಾಡಿ. ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಐ.ಎಂ.ಜಯರಾಮ ಶೆಟ್ಟಿ:- ಪರಿಸರದ ಪ್ರಶ್ನೆ. ಜನತೆಯ ಪ್ರಶ್ನೆ. ರೈತರ ಕಷ್ಟವನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ರೈತರ ಕಷ್ಟ ಅರ್ಥ ಮಾಡಿಕೊಳ್ಳದಿದ್ದರೆ ಬಹಳ ಕಷ್ಟ ಆಗುತ್ತದೆ.

ಉಪಾಧ್ಯಕ್ಷರು:- ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಹೇಳಿದ್ದಾರೆ.

ಶ್ರೀ ಕೆ.ಜಯರಾಮಶೆಟ್ಟಿ:- ಇದು ಹೆಜ್ಜೆ ಹೆಜ್ಜೆಗೂ ನಡೆಯುತ್ತಿದೆ. ಚೀಫ್ ಮಿನಿಸ್ಟರ್ ಆಫೀಸ್‌ನಲ್ಲಿ ಮೀಟಿಂಗ್ ಆಯಿತು.

ಶ್ರೀ ಬಿ.ರಮಾನಾಥ ರೈ:- ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದ

ಶ್ರೀ ಹೆಗಡೆಯವರು ಅಲ್ಲಿಗೆ ಹೋಗಿ ಬಂದಿದ್ದಾರೆ. ಅವರು ಏನು ಹೇಳುತ್ತಾರೆ ಕೇಳಿ.

(ಗೊಂದಲ)

(ಒಟ್ಟಿಗೆ 2-3 ಜನ ಸದಸ್ಯರು ಮಾತನಾಡುತ್ತಿದ್ದರು)

ಒಬ್ಬ ಮಾನ್ಯ ಸದಸ್ಯರು:- ಆ ಪರಿಸರದಲ್ಲಿ ಯಾರೂ ಬದುಕುವ ಹಾಗಿಲ್ಲ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:- ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರೇ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ಬಂದಿರುವುದರಿಂದ ಅದರ ಬಗ್ಗೆ ಅವರೇ ಏಕೆ ಹೇಳಿಕೆ ಕೊಡಬಾರದು? ನಾನು ಅಲ್ಲಿ ಪರಿಸ್ಥಿತಿ ಏನಿದೆಯೆಂಬುದನ್ನು ಹೇಳಿದ್ದು ಸುಳ್ಳೇ ಅಥವಾ ತಾವು ನೋಡಿರುವುದು ಸುಳ್ಳೇ? ಇದರ ಬಗ್ಗೆ ಏನಾದರೊಂದು ಹೇಳಿಕೆ ಕೊಡಿ.

(ಈ ಹಂತದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಮಾನ್ಯ ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದುದರಿಂದ ಯಾರು ಏನು ಮಾತನಾಡುತ್ತಿದ್ದಾರೆಂಬುದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಶ್ರೀ ಬಿ.ರಮಾನಾಥ ರೈ:- ಸರ್ಕಾರದ ವತಿಯಿಂದ ಹಿರಿಯ ಸಚಿವರೊಬ್ಬರು ಸ್ಥಳಕ್ಕೆ ಹೋಗಿ ಭೇಟಿ ಕೊಟ್ಟು ಪರಿಶೀಲಿಸಿ ಬಂದಿರುವುದರಿಂದ ಅದರ ಬಗ್ಗೆ ಅವರು ಹೇಳಲಿ.

(ಮತ್ತೆ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಉಪಾಧ್ಯಕ್ಷರು:- ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಬಿ.ರಮಾನಾಥ ರೈ:- ನಮ್ಮ ಜಿಲ್ಲೆ ರಾಜ್ಯದಿಂದ ಪ್ರತ್ಯೇಕವಾಗಿದೆಯೆಂದು ತಿಳಿದುಕೊಂಡಿದ್ದೀರೋ? ನೀವು ನಮ್ಮ ಮನಸ್ಸಿಗೆ ನೋವು ಮಾಡಬಾರದು. ಜಿಲ್ಲೆಯ ಸಮಸ್ಯೆ ಬಂದಾಗ ಅದರ ಗಂಭೀರತೆಗೆ ಸರ್ಕಾರ ಸ್ಪಂದಿಸಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರಾದ ಶ್ರೀ ಬಿ.ಎ.ಮೊಯಿದೀನ್‌ರವರು ಕೂಡ ಅದೇ ಜಿಲ್ಲೆಯವರಾಗಿದ್ದು ಆ ಜಿಲ್ಲೆಗೆ ಉಸ್ತುವಾರಿ ಸಚಿವರಾಗಿದ್ದಾರೆ. ಅದೇ ರೀತಿ ತಂತ್ರಜ್ಞಾನ, ಪರಿಸರ ಮತ್ತು ಅಸಂಪ್ರದಾಯಿಕ ಇಂಧನ ರಾಜ್ಯ ಸಚಿವರಿಗೂ ಅಲ್ಲಿನ ಸಮಸ್ಯೆ ಬಗ್ಗೆ ಈಗಾಗಲೇ ಅರಿವಾಗಿರಬೇಕು. ಇದರ ಬಗ್ಗೆ ಪತ್ರಿಕೆಯ ಸಂಪಾದಕೀಯ ಅಂಕಣದಲ್ಲೂ ಪ್ರಕಟವಾಗಿದ್ದು, ಅಲ್ಲಿನ ಕಾರ್ಖಾನೆಯಿಂದ ತ್ಯಾಜ್ಯ ನೀರನ್ನು ಹೊರಗೆ ಬಿಡುತ್ತಿದ್ದು ವಾತಾವರಣ ಕೆಡಿಸುತ್ತಿರುವ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲೂ ಸವಿಸ್ತಾರವಾಗಿ ಪ್ರಕಟವಾಗುತ್ತಿದೆ. ಈ ವಿಷಯವನ್ನು ಅಲ್ಲಿನ ಸ್ಥಳೀಯ ಶಾಸಕರು ಸ್ವತಃ ಸದನದ ಗಮನಕ್ಕೆ ತಂದಿರುವುದುರಿಂದ ಸರ್ಕಾರ ಇದನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಂಡು ಸ್ಥಳಕ್ಕೆ ಖುದ್ದಾಗಿ ಹೋಗಿ ಬರಬೇಕು. ಇಲ್ಲವೇ, ಅಲ್ಲಿಗೆ ನಾವು ಅಧಿಕಾರಿಗಳನ್ನು

ಕಳುಹಿಸುತ್ತೇವೆಂದರೆ ಆಗುವುದಿಲ್ಲ. ಸ್ವತಃ ತಾವು ಇದನ್ನು ಗಮನಕ್ಕೆ ತೆಗೆದುಕೊಂಡು ಅಲ್ಲಿರುವ ಸಮಸ್ಯೆಯನ್ನು ಪರಿಹರಿಸಬೇಕೇ ಹೊರತು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬಾರದು.

ಉಪಾಧ್ಯಕ್ಷರು:- ತಾವು ಬರುವುದಕ್ಕಿಂತ ಮುಂಚಿತವಾಗಿಯೇ ಮಂತ್ರಿಗಳು ಇದರ ಬಗ್ಗೆ ಸುದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ. ಮತ್ತು ಸರ್ಕಾರದ ಪರವಾಗಿ ಅಲ್ಲಿಗೆ ಅಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳೇ ಖುದ್ದಾಗಿ ಹೋಗಿ ಪರಿಶೀಲಿಸಿ ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಉಪ ಮುಖ್ಯಮಂತ್ರಿಗಳು ಹೇಳಿರುವುದರಿಂದ ತಾವೇಕೆ ಪದೇ ಪದೇ ಹೇಳುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಸದಸ್ಯರುಗಳು ಹೇಳಿರುವ ಎಲ್ಲಾ ವಿಚಾರಗಳನ್ನೂ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಸ್ವತಃ ಸಂಬಂಧಪಟ್ಟ ಮಂತ್ರಿಗಳೇ ಸ್ಥಳಕ್ಕೆ ಭೇಟಿ ಕೊಟ್ಟು ಅಲ್ಲಿ ಎಷ್ಟು ಎಕರೆ, ಎಷ್ಟು ಪ್ರಮಾಣದಲ್ಲಿ ನಷ್ಟವಾಗಿದೆ ಎಂಬುದರ ಬಗ್ಗೆ ಅಧಿಕಾರಿಗಳು ಕೊಟ್ಟಿರುವ ಮಾಹಿತಿಯನ್ನು ತೆಗೆದುಕೊಂಡು.....

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಆ ಜಿಲ್ಲೆಯ ಉಸ್ತುವಾರಿ ಸಚಿವರೇ ಸ್ಥಳಕ್ಕೆ ಭೇಟಿ ಕೊಟ್ಟು ಬಂದಿರುವುದರಿಂದ ಆ ಕುರಿತು ಹೇಳಿಕೆ ಕೊಡಲು ತೊಂದರೆಯೇನಿದೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಅಲ್ಲಿ ಆಗಿರತಕ್ಕ ನಷ್ಟವನ್ನು ಕಾರ್ಖಾನೆಯವರ ಮೂಲಕ ಕೊಡಿಸುವುದಕ್ಕೆ ನಾವು ತಯಾರಾಗಿದ್ದೇವೆ, ಈಗಾಗಲೇ ಈ ಕುರಿತು ಮಾತುಕತೆ ನಡಿಸಿದ್ದೇವೆ, ಸ್ವತಃ ಮಂತ್ರಿಗಳೇ ಅಲ್ಲಿಗೆ ಭೇಟಿ ಕೊಟ್ಟು ಆಗಿರುವ ಒಟ್ಟು ನಷ್ಟದ ಬಗ್ಗೆ ಪರಿಶೀಲಿಸಿ ಪರಿಹಾರ ಕೊಡಿಸುವ ಕೆಲಸವನ್ನು ಅವರು ಮಾಡುತ್ತಾರೆ. ಅಲ್ಲದೆ, ಕಾರ್ಖಾನೆಯಿಂದ ತ್ಯಾಜ್ಯ ನೀರು ಹೊರಗೆ ಹೋಗದ ರೀತಿಯಲ್ಲಿ ಈಗಾಗಲೇ ನಿಷೇದಾಜ್ಞೆ ಹೊರಡಿಸಲಾಗಿದ್ದು, ತಪ್ಪಿಸಗಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೂ ಕಠಿಣ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ:- ನಾನು ಒಂದೇ ಮಾತನ್ನು ಹೇಳಬಯಸುತ್ತೇನೆ. ಅಲ್ಲಿನ ಉಸ್ತುವಾರಿ ಸಚಿವರೇ ಸ್ಥಳಕ್ಕೆ ಖುದ್ದಾಗಿ ಭೇಟಿ ಕೊಟ್ಟು ಬಂದ ನಂತರವೂ ಸದನದಲ್ಲಿ ಆ ವಿಚಾರವಾಗಿ ಅವರು ಸ್ಪಷ್ಟವಾಗಿ ಉಲ್ಲೇಖಿಸುವುದಕ್ಕೆ ತೊಂದರೆಯೇನಿದೆ?

ಶ್ರೀ ಸಿ.ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ, ಈ ಸದನದ ನಡವಳಿಕೆಯನ್ನು ಯಾವ ರೀತಿ ನಡೆಸಬೇಕೆಂದಿರುವ ಬಗ್ಗೆ ನಾವೇ ನಿಯಮಾವಳಿಯನ್ನು ರಚಿಸಿಕೊಂಡಿರುವುದರಿಂದ ನಿಯಮಾವಳಿ ಪ್ರಕಾರ ಸದನದಲ್ಲಿ ಸದಸ್ಯರುಗಳು ನಡೆದುಕೊಳ್ಳುವುದಕ್ಕೆ ದಯವಿಟ್ಟು ತಾವು ಅವಕಾಶ ಮಾಡಿಕೊಡಬೇಕೆಂದು

ವಿನಂತಿಸಿಕೊಳ್ಳುತ್ತೇನೆ. ಸದನದಲ್ಲಿ ಯಾರು, ಯಾವಾಗ ಬೇಕಾದರೂ ಮಾತನಾಡಬಹುದೆಂದರೆ ಏನರ್ಥ?

(ಗೊಂದಲ)

(ಈ ಹಂತದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಮಾನ್ಯ ಸದಸ್ಯರುಗಳಾದ ಡಿ.ವಿ.ಸದಾನಂದಗೌಡ, ಎ.ರುಕ್ಮಯ್ಯ ಪೂಜಾರಿ, ಬಿ.ರಮಾನಾಥ ರೈ, ಕೆ.ಜಯರಾಮಶೆಟ್ಟಿ, ಕುಂಬೆ ಸುಂದರರಾವ್ ಮತ್ತು ಕೆ.ಪ್ರತಾಪಚಂದ್ರಶೆಟ್ಟಿಯವರು ಸದನದ ಬಾವಿಯಲ್ಲಿ ಧರಣಿ ಹೂಡಿದರು)

ಶ್ರೀ ಎಂ.ನಾರಾಯಣಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಇದು ಸರಿಯಲ್ಲ, ಸುಮ್ಮನೆ ಕಾಲಹರಣ ಮಾಡತಕ್ಕಂಥಾದ್ದು, ಇವರು ಸದನದಲ್ಲಿ ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ.

(ಈ ಹಂತದಲ್ಲಿ ಧರಣಿ ಹೂಡಿದ ಸದಸ್ಯರುಗಳು, ಜಿಲ್ಲೆಯ ಉಸ್ತುವಾರಿ ಸಚಿವರೇ ಆ ಕುರಿತು ಹೇಳಿಕೆ ಕೊಡಬೇಕೆಂದು ಆಗ್ರಹಿಸುತ್ತಿದ್ದರು)

ಉಪಾಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾಗ ತಾವು ಕೇಳುವಂಥ ಯಾವುದೇ ಪ್ರಶ್ನೆಗೆ ಉತ್ತರ ಹೇಳುತ್ತಾರೆ. ಅವರು ಇಲ್ಲದಿದ್ದಾಗ ಉಪ ಮುಖ್ಯಮಂತ್ರಿಗಳು ಹೇಳುವುದು ವಾಡಿಕೆ. ಈಗ ಅವರು ಸಮಂಜಸವಾದ ಉತ್ತರ ಕೊಟ್ಟಿರುವುದರಿಂದ ಮತ್ತೆ ಹೇಳತಕ್ಕಂಥ ಅವಶ್ಯಕತೆ ಇಲ್ಲ.

(ಈ ಹಂತದಲ್ಲಿ ಉಪಾಧ್ಯಕ್ಷರು ಹೇಳಿದ ತೀರ್ಮಾನವನ್ನು ಆಡಳಿತ ಪಕ್ಷದವರು ಮೇಜು ಕಟ್ಟಿ ಸ್ವಾಗತಿಸಿದರು)

ಶ್ರೀ ವೈ.ರಾಮಕೃಷ್ಣ:- ಉಸ್ತುವಾರಿ ಸಚಿವರೇ ನಿನ್ನೆ ಸ್ಥಳಕ್ಕೆ ಭೇಟಿ ಕೊಟ್ಟು ನೋಡಿಕೊಂಡು ಬಂದಿರುವುದರಿಂದ, ಅದು ಬಗ್ಗೆ ಅವರು ಹೇಳಿಕೆ ಕೊಟ್ಟರೆ ಧರಣಿಯನ್ನು ಹಿಂತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ:- ಇಂತಹ ಮಂತ್ರಿಗಳೇ ಉತ್ತರ ಹೇಳಬೇಕೆಂದು ಮಾನ್ಯ ಸದಸ್ಯರುಗಳು ಹೇಳುವುದಾದರೆ ಸಂಬಂಧಪಟ್ಟ ಮಂತ್ರಿಗಳಿಗೆ ಜವಾಬ್ದಾರಿ ಇಲ್ಲವೇ? ತಂತ್ರಜ್ಞಾನ, ಪರಿಸರ ಮತ್ತು ಅಸಾಂಪ್ರದಾಯಿಕ ಇಂಧನ ರಾಜ್ಯ ಸಚಿವರಾಗಿರುವ ಶಿವಣ್ಣನವರ್ ಬಸವರಾಜ್ ನೀಲಪ್ಪನವರೂ ಸಹ ಜವಾಬ್ದಾರಿಯುತ ಮಂತ್ರಿಗಳಾಗಿದ್ದು, ಅವರಿಗೆ ಜವಾಬ್ದಾರಿ ಇರುವುದಿಲ್ಲವೇ? ಅವರು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಸಮರ್ಪಕವಾಗಿ ಉತ್ತರ ಕೊಟ್ಟಿರುವಾಗ, ಜಿಲ್ಲಾ ಉಸ್ತುವಾರಿ ಮಂತ್ರಿಗಳೇ ಉತ್ತರ ಕೊಡಬೇಕೆಂದರೆ ಹೇಗೆ? ತಾವೂ (ವೈ.ರಾಮಕೃಷ್ಣ) ಸಹ ಹಿಂದೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದವರು, ಇಂತಹ ನಡವಳಿಕೆಯನ್ನು ಒಪ್ಪುತ್ತೀರಾ? ಉತ್ತರವನ್ನು ಕಾನೂನಿನ ಚೌಕಟ್ಟಿನಲ್ಲಿ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು:- ಮಾನ್ಯ ಖರ್ಗೆಯವರು ಮಾತನಾಡುತ್ತಾರೆ. ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಾವೆಲ್ಲರೂ ಈ ರೀತಿ ಮಾಡಿದರೆ ಹೇಗೆ? ತಾವುಗಳು ದಯಮಾಡಿ ತಮ್ಮ ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಎಂ.ನಾರಾಯಣಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಸರ್ಕಾರವನ್ನು ನಡೆಸಿದವರು ಈ ರೀತಿ ಮಾಡಿದರೆ ಹೇಗೆ?

(ಧರಣಿಯನ್ನು ತೊಡಗಿದ್ದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಕ್ಕೆ ಹಿಂದಿರುಗಿದರು)

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಆ ಭಾಗದಲ್ಲಿ ಈ ವಿಚಾರ ಬಹಳ ಸೀರಿಯಸ್ ಮಟ್ಟಕ್ಕೆ ಬಂದಿರುವುದರಿಂದ ಅವರುಗಳು ಈ ರೀತಿಯ ಪ್ರತಿಭಟನೆ ಮಾಡುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಡತಕ್ಕ ಹಕ್ಕಿದೆ, ಅದನ್ಯಾರೂ ಇಲ್ಲವೆಂದು ಹೇಳಲಾಗದು. ಅದರಲ್ಲೂ ಉಪಮುಖ್ಯಮಂತ್ರಿಯವರು ಇದರ ಬಗ್ಗೆ ಹೇಳಿಕೆ ನೀಡುತ್ತಿದ್ದಾರೆಂದರೆ ಒಪ್ಪತಕ್ಕದ್ದು. ಆದರೆ, ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳಕ್ಕೆ ಹೋಗಿ ಬಂದಿದ್ದಾರೆ, ಅವರು ಅದೇ ಜಿಲ್ಲೆಯವರಾಗಿರುವುದರಿಂದ ಅವರಿಗೆ ಎಲ್ಲಾ ಮಾಹಿತಿ ಗೊತ್ತಿದೆ, ಅವರು ಸ್ವಲ್ಪ ಬಾಯಿಬಿಚ್ಚಿ ಮಾತನಾಡಲಿಯೆಂದು ಅವರುಗಳು ಕೇಳುತ್ತಿರುವುದು. ಆ ವರದಿಯಲ್ಲಿ ಏನಿದೆ, ಏನಿಲ್ಲ ಎಂಬುದು ಅವರಿಗೆ ಗೊತ್ತಿರುವ ಕಾರಣ ಅವರು ಇದರ ಬಗ್ಗೆ ಮಾಹಿತಿ ನೀಡಲಿಯೆಂಬುದು ಇವರುಗಳ ವಾದವಾಗಿದೆ. ಅವರು ಹೇಳತಕ್ಕದ್ದು ಸರಿಯಲ್ಲ, ಅವರು ಸಚಿವರಲ್ಲ, ಅವರ ಅಥಾರಿಟಿಯನ್ನು ಚಾಲೆಂಜ್ ಮಾಡುತ್ತಿಲ್ಲ. ಅವರು ಖುದ್ದಾಗಿ ಸ್ಥಳಕ್ಕೆ ಭೇಟಿ ಮಾಡಿದ್ದರಿಂದ, ಮಾಹಿತಿ ಅವರಲ್ಲಿ ಇದ್ದ ಕಾರಣ, ಆ ವರದಿಯನ್ನು ಅವರು ನೋಡಿರುವ ಕಾರಣ ಅವರು ಇದರ ಬಗ್ಗೆ ಮಾಹಿತಿ ನೀಡಿದರೆ ಉತ್ತಮ ಮತ್ತು ನಾಳೆ ದಿವಸ ಅವರು ಜಿಲ್ಲೆಗೆ ಬಂದಾಗ ನಾವು ಕೇಳಲು ಅನುಕೂಲವಾಗುತ್ತದೆ ಎನ್ನತಕ್ಕ ಉದ್ದೇಶದಿಂದ ಇವರುಗಳು ಧರಣಿ ಮಾಡಲು ಬಂದಿದ್ದರೇ ಹೊರತು ಬೇರೆ ದೃಷ್ಟಿಯಿಂದ ಬಂದಿರಲಿಲ್ಲ. ಇದರಲ್ಲಿ ಯಾವುದೇ ರಾಜಕೀಯವಿಲ್ಲ. ಉಪಮುಖ್ಯಮಂತ್ರಿಯವರು ಇದರ ಬಗ್ಗೆ ಹೇಳುತ್ತಾ ಪರಿಹಾರವೇನು ಕೊಡಬೇಕೋ ಅದನ್ನು ಕೊಡತ್ತೇವೆ ಮುಂತಾಗಿ ಹೇಳಿದ್ದಾರೆ. ಅಲ್ಲೇನಾದರೂ ವ್ಯತ್ಯಾಸವಾಗಿದ್ದರೆ ಅದನ್ನು ಸರಪಡಿಸುವುದಾಗಿ ಹೇಳಿದ್ದಾರೆ. ಇವೆಲ್ಲವೂ ಸ್ವಾಗತಾರ್ಹವಾದುದು. ಆದರೆ ಖುದ್ದಾಗಿ ಸ್ಥಳವನ್ನು ನೋಡಿದವರು ಇಂಥ ಸಮಯದಲ್ಲಿ ಹೇಳುವುದು ಒಳಿತು. ತಮಗೆ ಅಧಿಕಾರವಿದೆ, ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದರೆ, ಮಂತ್ರಿಗಳಿದ್ದರೆ ಅನೇಕ ಸಲ ಪ್ರವಾಸೋದ್ಯಮದ ವಿಷಯ ಬಂದಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಏನಾದರೂ ಹೇಳುವುದಿದ್ದರೆ ಹೇಳಿ ಎಂದು ಅನೇಕಬಾರಿ ತಾವು ಹೇಳಿರುವುದಿದೆ. ಅದೇ ರೀತಿ ಒಂದು ವೇಳೆ ಮಾಹಿತಿ ಇದ್ದರೆ ಅದನ್ನೇಕೆ ಮುಚ್ಚಿಟ್ಟುಕೊಳ್ಳಬೇಕು, ಅದನ್ನು ಹೇಳಲಿ ಎಂದು ಇವತ್ತು ಒತ್ತಾಯ ಮಾಡುತ್ತಿದ್ದಾರೆಯೇ ಹೊರತು ಬೇರೆ ದುರುದ್ದೇಶದಿಂದ ಇವರುಗಳು ಧರಣಿಯನ್ನು

ಮಾಡುತ್ತಿಲ್ಲ. ಆದ್ದರಿಂದ ಜಿಲ್ಲಾ ಉಸ್ತುವಾರಿ ಸಚಿವರು ಇದರ ಬಗ್ಗೆ ಸ್ಪಷ್ಟಪಡಿಸಬೇಕೆಂದು ತಾವು ಹೇಳಬೇಕು.

+ಶ್ರೀ ಯು.ಆರ್.ಸಭಾಪತಿ:- ಮಾನ ಉಪಾಧ್ಯಕ್ಷರೆ, ಯಾವುದೇ ರೀತಿಯ ರಾಜಕೀಯ ಸ್ವಪ್ರತಿಷ್ಠೆಗಾಗಿ ನಾವಿಲ್ಲಿ ಗಲಾಟೆ ಮಾಡುತ್ತಿಲ್ಲ. ಈ ಹಿಂದೆ ಈ ಎಂ.ಆರ್.ಪಿಎಲ್. ಕೈಗಾರಿಕೆಯಿಂದಾಗಿ ಇಡೀ ಜಿಲ್ಲೆಯಲ್ಲಿ ಅಸ್ತವ್ಯಸ್ತವಾಗಿ ವಾತಾವರಣ ನಿರ್ಮಾಣವಾಗಿತ್ತು. ಈ ಕೈಗಾರಿಕೆ ಯಾವುದೇ ರೀಸೈಕ್ಲಿಂಗ್ ಯೂನಿಟ್ ಹಾಕದೆ ತ್ಯಾಜ್ಯವಸ್ತುಗಳನ್ನು ಹೊರಗೆ ಬಿಡುವುದಿಲ್ಲವೆಂದು ಹೇಳಿ ಮಳೆ ಬಂತು ನೀರು ಹರಿದುಹೋಗುತ್ತದೆಂದು ಪಂಪು ಕೆಟ್ಟುಹೋಗಿದೆಯೆಂದು ಗುಟ್ಟಾಗಿ ತ್ಯಾಜ್ಯ ವಸ್ತುವನ್ನು ಹೊರಗೆ ಬಿಟ್ಟಿದ್ದಾರೆ. ಇದರಿಂದ ಹಲವಾರು ಎಕರೆ ಬೆಳೆ ನಾಶವಾಗಿದೆ. ಮೊನ್ನೆ ಕೆ.ಡಿ.ಪಿ. ಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿ ನಮ್ಮ ಉಸ್ತುವಾರಿ ಸಚಿವರು ನಾನು ಸ್ಥಳವನ್ನು ನೋಡಿಕೊಂಡು ಬಂದಿದ್ದಾರೆ. ಇದರಿಂದ ಹಲವಾರು ಎಕರೆ ಬೆಳೆ ನಾಶವಾಗಿದೆ. ಮೊನ್ನೆ ಕೆ.ಡಿ.ಪಿ. ಸಭೆಯಲ್ಲಿ ಇದರ ಬಗ್ಗೆ ಚರ್ಚೆಯಾಗಿ ನಮ್ಮ ಉಸ್ತುವಾರಿ ಸಚಿವರು ನಾನು ಸ್ಥಳವನ್ನು ನೋಡಿಕೊಂಡು ಬರುತ್ತೇನೆಂದು ಹೇಳಿದ್ದರು. ಅವರೂ ಅಧಿಕಾರಿಗಳು ಎಲ್ಲರೂ ಹೋಗಿ ನೋಡಿಕೊಂಡು ಬಂದಿದ್ದಾರೆ. ಇಲ್ಲಿ ಆಗಿರುವ ಚರ್ಚೆ ಬಗ್ಗೆ ಒಟ್ಟು ಆಧಾರದಿಂದ ಉಪಮುಖ್ಯಮಂತ್ರಿಯವರು ಸರ್ಕಾರ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಹೇಳಿದ್ದಾರೆ. ಅದನ್ನು ಮೆಚ್ಚತಕ್ಕದ್ದು. ಉಸ್ತುವಾರಿ ಸಚಿವರು ಅಲ್ಲಿಗೆ ಹೋಗಿದ್ದಾರೆ ಅವರು ಅದರ ಬಗ್ಗೆ ಈ ಸದನದಲ್ಲಿ ಹೇಳಿಕೆಕೊಟ್ಟರೆ ತಪ್ಪೇನಾಗುತ್ತದೆ? ಅದರಲ್ಲಿ ಸ್ವಪ್ರತಿಷ್ಠೆ ಏನಾದರೂ ಇದೆಯೇ? ಉಸ್ತುವಾರಿ ಸಚಿವರು ಅಲ್ಲಿಗೆ ಭೇಟಿ ನೀಡಿರುವ ಬಗ್ಗೆ ವರದಿ ಇದೆ. ಅದನ್ನು ತಾವು ಸ್ವಪ್ರತಿಷ್ಠೆಯಾಗಿ ತೆಗೆದುಕೊಂಡಿರುವುದಾಗಿ ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಜನರು ಉಸ್ತುವಾರಿ ಸಚಿವರ ಬಾಯಿಂದ ಏನು ಬಂದಿದೆ ಎಂಬ ಬಗ್ಗೆ ಕೇಳುತ್ತಿದ್ದಾರೆ. ಅವರು ಬಾಯಿಮುಚ್ಚಿಕೊಂಡು ಕುಳಿತಿದ್ದಾರೆಂದರೆ ಇವತ್ತೇನೋ ಗುಟ್ಟು ನಡೆದಿದೆ ಎಂದು ಭಾವಿಸಬೇಕಾಗುತ್ತದೆ.

+ಶ್ರೀ ಸಿದ್ಧರಾಮಯ್ಯ:- ಇಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಇಲ್ಲ. ಸರ್ಕಾರವೆಂದರೆ ಎಲ್ಲಾ ಮಂತ್ರಿಗಳದ್ದೂ ಜಂಟಿ ಜವಾಬ್ದಾರಿಯಾಗಿರತಕ್ಕದ್ದು. ಸಂಬಂದಪಟ್ಟವರ ಇಲಾಖೆಯಿಂದ ಆ ವರದಿಯ ಬಗ್ಗೆ ನನಗೂ ಮಾಹಿತಿ ಬಂದಿದೆ. ಅಧಿಕಾರಿಗಳು ಸ್ಥಳಕ್ಕೆ ಹೋಗಿ ಬಂದಿದ್ದಾರೆ. ರಾಮಾನಾಥರೈರವರು ಸರ್ಕಾರದಲ್ಲಿ ಸಚಿವರಾಗಿದ್ದಂಥವರು, ಮಾನ್ಯ ಖರ್ಗೆಯವರು ಹಿರಿಯ ಮಂತ್ರಿಗಳಾಗಿದ್ದವರು, ವೈ.ರಾಮಕೃಷ್ಣರವರೂ ಮಂತ್ರಿಗಳಾಗಿದ್ದಂಥವರು. ಸರ್ಕಾರದ ವ್ಯವಸ್ಥೆ ಯಾವುದಿದೆ ಅದರ ಮೂಲಕವೇ ನಾವು ಎಲ್ಲಾ ವರದಿಯನ್ನು ತರಿಸತಕ್ಕದ್ದು. ಆ ವರದಿ ಸರಿಯಾಗಿಲ್ಲವೆಂದು ಅವರಲ್ಲಿ ಅಸಮಧಾನವಿದೆ. ಆದ್ದರಿಂದ ಸ್ವತಃ ಮಂತ್ರಿಗಳೇ ನಾನೇ ಭೇಟಿ ಕೊಡುತ್ತೇನೆಂದು ಹೇಳಿದ್ದಾರೆ. ಅಲ್ಲಾಗಿರುವ ಅನಾಹುತವನ್ನು ಪರಿಶೀಲನೆ ಮಾಡುತ್ತೇನೆ, ಅಧಿಕಾರಿಗಳು ತಪ್ಪು ವರದಿಯನ್ನು ಕೊಟ್ಟಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ಇವತ್ತು

ಎಂ.ಆರ್.ಪಿ.ಎಲ್.ನವರೊಂದಿಗೆ ಯಾವುದೇ ಅಧಿಕಾರಿ ಶಾಮೀಲಾಗಿದ್ದರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಕೈಗಾರಿಕೆಯವರೊಡನೆ ಮಾತನಾಡಿ ಅದೆಷ್ಟೇ ಎಕರೆ ಬೆಳೆ ನಾಶವಾಗಿದ್ದರೂ ಅಷ್ಟು ಪರಿಹಾರವನ್ನು ಕೊಡಿಸತಕ್ಕ ಕೆಲಸ ಮಾಡುತ್ತೇವೆ. ಮತ್ತು ಈಗಾಗಲೇ ತ್ಯಾಜ್ಯವಸ್ತುಗಳು ಹೋಗುವ ನೀರನ್ನು ನಿಲ್ಲಿಸುವ ಬಗ್ಗೆ ಪ್ರಾಪಿಬಿಟರಿ ಅರ್ಡರನ್ನು ಸರ್ಕಾರ ಹೊರಡಿಸಿದೆಯೆಂದು ಹೇಳಿದ್ದಾರೆ. ಬಹಳ ಸ್ಪಷ್ಟವಾಗಿ ಉತ್ತರವಿರುವಾಗ, ಇವರೇ ಉತ್ತರವನ್ನು ಕೊಡಬೇಕು, ಅವರೇ ಉತ್ತರವನ್ನು ಕೊಡಬೇಕು ಎಂಬುದಲ್ಲ, ಇದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆ ಇಲ್ಲ. ಮಾನ್ಯ ಸದಸ್ಯರುಏನೂ ಗೊತ್ತಿಲ್ಲದ ಮಂತ್ರಿಗಳು ಉತ್ತರ ಕೊಟ್ಟಿಬಿಟ್ಟರು ಎಂಬುದಾಗಿ ಮಾತನಾಡಬಾರದು. ಅವರೂ ಸಹ ಜವಾಬ್ದಾರಿಯುತ ಸಚಿವರು. ನೀವುಗಳು ಹೇಗೆ ಸದಸ್ಯರಾಗಿ ಬಂದು ಜವಾಬ್ದಾರಿಯುತವಾಗಿ ಮಾತನಾಡುತ್ತೀರಿ. ಅವರೂ ಅಷ್ಟೇ ಜವಾಬ್ದಾರಿಯುತವಾಗಿ ನಿಮಗಿಂತ ಹೆಚ್ಚು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದಾರೆ. ಆದ್ದರಿಂದ ಆ ರೀತಿಯಾದ ಪದಗಳನ್ನೆಲ್ಲಾ ತಾವು ಬಳಸಬಾರದು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ನಾವುಗಳು ಕಾದುನೋಡೋಣ.

ಉಪಾಧ್ಯಕ್ಷರು:- ತಾವುಗಳು ದಯಮಾಡಿ ಕುಳಿತುಕೊಳ್ಳಿ. ನೀರಾವರಿ ಸಚಿವರು ಸ್ಟೇಟ್‌ಮೆಂಟ್ ಮಾಡಿ.

ಮಂತ್ರಿಗಳ ಹೇಳಿಕೆ.

ವಿಷಯ:- ಜುರಾಲ ಅಣೆಕಟ್ಟೆಯ ಎತ್ತರವನ್ನು ಏರಿಸುವ ಬಗ್ಗೆ.

ಶ್ರೀ ಕೆ.ಎನ್.ನಾಗೇಗೌಡ (ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಜುರಾಲ ವಿಷಯದ ಬಗ್ಗೆ ಇಲ್ಲಿ ಗುರುವಾರ, ಮೇಲ್ಮನೆಯಲ್ಲಿ ಶುಕ್ರವಾರ ಸಾಕಷ್ಟು ಚರ್ಚೆಯಾಗಿ ಇದರ ಬಗ್ಗೆ ವಿರೋಧ ಪಕ್ಷದವರ ಮತ್ತು ಸರ್ವಪಕ್ಷದವರ ಸಭೆಯನ್ನು ಮಾಡಿ ನಿರ್ಧಾರಕ್ಕೆ ಬರುವುದಾಗಿ ಹೇಳಿದ್ದೆ. ಅದರಂತೆ ನಾವೆಲ್ಲಾ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಆ ನಿರ್ಣಯದ ವಿಚಾರವನ್ನು ತಮ್ಮ ಅನುಮತಿ ಪಡೆದು ಸಭೆಯ ಗಮನಕ್ಕೆ ತರಬಯಸುವೆ. ''ಸರ್ವ ಪಕ್ಷಗಳ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ ಜುರಾಲ ಯೋಜನೆಗೆ ಸಂಬಂಧಿಸಿದಂತೆ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಿರುವ ಬಗ್ಗೆ ಮತ್ತು ಯೋಜನೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಮಾನ್ಯ ಪ್ರಧಾನಿಯವರನ್ನು ಭೇಟಿಯಾಗಲು ಸರ್ವಪಕ್ಷಗಳ ಮುಖಂಡರ ನಿಯೋಗವೊಂದು ಸನ್ಮಾನ್ಯ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ ಕರೆದುಕೊಂಡು ಹೋಗಲು ತೀರ್ಮಾನಿಸಲಾಗಿದೆ.''